ಬಾ ಮತ್ತು ಬಾಪು 150ನೇ ವರ್ಷಾಚರಣೆ - ಪುಸ್ತಕ ಮಾಲಿಕೆ

ನಮ್ಮ ಗಾಂಧೀ ತಾತ

ಸಂಗ್ರಹ : ಡಾ. ಹೊ. ಶ್ರೀನಿವಾಸಯ್ಯ



ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ನಮ್ಮ
ಗಾಂಧೀ ತಾತ

ಸಂಗ್ರಹ
ಡಾ. ಹೊ. ಶ್ರೀನಿವಾಸಯ್ಯ

ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560001, ದೂರವಾಣಿ : 080-22261967

NAMMA GANDHI THATHA

Collected by **Dr. H. Srinivasaiah**


Published by **Karnataka Gandhi Smaraka Nidhi**

Gandhi Bhavana, Kumara Park East

Bengaluru - 560001

Phone : 080-22261967

1st Edition	:	2012
2nd Edition	:	2014
Revised 3rd Edition	:	2018
Copies	:	10000 Nos.
Pages	:	X + 46
Price	:	22/-
Print by	:	**CreativeGeekz** Yadhava College Road Madhava Nagara, Bengaluru Ph : 080 40927049



ಅರ್ಪಣೆ

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ದ್ವಿತೀಯ ಅಧ್ಯಕ್ಷರಾದ

ಶ್ರೀ ಟೇಕೂರ್ ಸುಬ್ರಮಣ್ಯಂ ಅವರಿಗೆ

ಗೌರವಪೂರ್ವಕವಾಗಿ

ನಿಮ್ಮೊಂದಿಗೆ

ಮಹಾತ್ಮ ಗಾಂಧೀಜಿ ಅವರನ್ನು ಪುಟ್ಟ ಮಕ್ಕಳ ಮನದಲ್ಲಿ ಒಡಮೂಡಿಸಲು ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರು ಈ ಕಿರುಪುಸ್ತಕವನ್ನು ಬರೆದಿದ್ದಾರೆ. 'ಯಾರ ಜಪ್ತಿಗೂ ನಿಲುಕದ ನಕ್ಷತ್ರ"ವಾಗಿರುವ ಗಾಂಧೀಜಿ ಅವರನ್ನು ಸಚಿತ್ರ ಪೂರಕವಾಗಿ, ಸರಳವಾಗಿ, 'ಗಾಂಧೀ ತಾತ' – ಎಂಬ ಭಾವದ ಬೆಸುಗೆಯಿಂದ ಮಕ್ಕಳಿಗೆ ಕಟ್ಟಿಕೊಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಗಾಂಧೀ ಅವರನ್ನು ತಿಳಿದುಕೊಳ್ಳಲು ಪ್ರಯತ್ನಿಸುವ ಪ್ರತಿಯೊಬ್ಬರಿಗೂ ಇದೊಂದು ಪ್ರವೇಶಿಕೆಯಂತಿದೆ.

ಬಾ ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ – 2018ರ ಸಂದರ್ಭದಲ್ಲಿ ಈ ಕೃತಿಯ ಮರುಮುದ್ರಣಕ್ಕೆ ಆಯ್ಕೆ ಮಾಡಿದ, ಗಾಂಧೀ ಭವನದ ಎಲ್ಲಾ ಸದಸ್ಯರುಗಳಿಗೆ ಮತ್ತು ಕಾರ್ಯದರ್ಶಿ ಅವರಿಗೂ ಕೃತಜ್ಞತೆಗಳನ್ನು ತಿಳಿಸ ಬಯಸುತ್ತೇನೆ. ಈ ಪುಸ್ತಕವನ್ನು ಗಾಂಧೀ ವಿಚಾರ ಸಂಸ್ಕಾರ ಪರೀಕ್ಷೆಯನ್ನು ತೆಗೆದುಕೊಳ್ಳುವ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಪಠ್ಯವಾಗಿ ಆಯೋಜಿಸಿರುವ ಗಾಂಧೀ ಸಂಶೋದನಾ ಪ್ರತಿಷ್ಠಾನ, ಜಲಗಾಂವ್, ಮಹಾರಾಷ್ಟ್ರ ಅವರಿಗೂ, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಪರೀಕ್ಷಾ ಸಮಿತಿ ಅವರಿಗೂ ಮತ್ತು ಗಾಂಧೀ ವಿಚಾರ ಸಂಸ್ಕಾರ್ ಪರೀಕ್ಷೆ, ರಾಜ್ಯ ಸಂಚಾಲಕರಾದ ಡಾ. ಅಬಿದ ಬೇಗಂ ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಪರಿಷ್ಕೃತ ಆವೃತ್ತಿಯನ್ನು ಅಂದವಾಗಿ ಹೊಸ ಸಚಿತ್ರಗಳು ಹಾಗೂ ವಿನ್ಯಾಸದೊಂದಿಗೆ ಮುದ್ರಿಸಿದ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಮತ್ತು ತಂಡದವರಿಗೆ ಗಾಂಧೀ ಭವನದ ಪರವಾಗಿ ನಮನಗಳು ಸಲ್ಲುತ್ತವೆ.

ಬೆಂಗಳೂರು
ಜುಲೈ 4, 2018

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಪ್ರಕಾಶಕರ ಮಾತು

ಗಾಂಧೀಜಿಯವರ ಜೀವನದ ಬಗ್ಗೆ ಅನೇಕ ಪುಸ್ತಕಗಳೂ ಪ್ರಕಟವಾಗಿವೆ. ಆದರೂ ಮಕ್ಕಳಿಗೆ ಹಾಗೂ ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಓದಲು ಸುಲಭವಾಗುವಂತೆ ಗಾಂಧೀಜಿಯವರ ಜೀವನ ಚರಿತ್ರೆಯನ್ನು ಸಚಿತ್ರವಾಗಿ ಪ್ರಕಟಿಸಲಾಗಿದೆ. ಇಂತಹ ಪುಸ್ತಕದ ಅವಶ್ಯಕತೆಯನ್ನು ಅನೇಕರು ಸೂಚಿಸಿದರಲ್ಲದೆ ಬರೆಯಲು ಪ್ರೋತ್ಸಾಹಿಸಿದರು. ಈ ಪ್ರೋತ್ಸಾಹವೇ ಈ ಪುಸ್ತಕ ಬರೆಯಲು ಉತ್ತೇಜನವಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪ್ರಕಟಿಸಿ, ಪ್ರೋತ್ಸಾಹ ನೀಡಿತು.

2014ರಿಂದ ರಾಜ್ಯದ ಬಹುಪಾಲು ಶಾಲಾ ಕಾಲೇಜುಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರ ಸ್ಥಾಪನೆ ಮಾಡುತ್ತಿರುವುದು, ಗಾಂಧೀಜಿ ವಿಚಾರದಲ್ಲಿ ಹೆಚ್ಚು ಯುವಜನರು ಆಸಕ್ತಿ ತೋರುತ್ತಿರುವುದು ಶುಭಸೂಚನೆ ಹಾಗೂ ನಮಗೆ ಹೆಮ್ಮೆ ತಂದಿದೆ.

ಸಾರ್ವಜನಿಕರು ಗಾಂಧೀ ಸಾಹಿತ್ಯವನ್ನು ಹೆಚ್ಚು ಓದಿದರೆ ಗಾಂಧೀ ಭವನದ ಉದ್ದೇಶ ಸಾರ್ಥಕವಾಗುತ್ತದೆ.

ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೆ, ಅಂದವಾಗಿ ಮುದ್ರಿಸಿ ಗಾಂಧಿ ವಿಚಾರ ಪ್ರಚಾರಕಾರ್ಯವನ್ನು ತಮ್ಮ ಜೀವನದ ಶ್ರೇಷ್ಠ ಕೈಂಕರ್ಯ ಎಂದು ದುಡಿಯುತ್ತಿರುವ ಅಭಿಮಾನಿ ಸಮೂಹ ಸಂಸ್ಥೆಯ ಮಾಲೀಕರೂ, ಆಧ್ಯಾತ್ಮಿಕ ಚಿಂತಕರೂ ಆದ ಶ್ರೀ ಟಿ. ವೆಂಕಟೇಶ್ ರವರಿಗೆ ನಮ್ಮ ವಿಶೇಷವಾದ ಕೃತಜ್ಞತೆಗಳು.

ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
1985 ರಿಂದ 2017
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಪರಿವಿಡಿ

"ಜೀವನವೆಂಬುದೊಂದು ಆಕಾಂಕ್ಷೆ. ಸಿದ್ಧಿ ಮತ್ತು ಸಾಕ್ಷಾತ್ಕಾರಗಳಿಗಾಗಿ
ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ
ಮೂಲಕ ನಾವು ಉಚ್ಚ ಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ
ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು
ಹೋಗಲಾಡಿಸಲು ನಾನು ಸತ್ಯದೇವತೆಯನ್ನು
ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ"

–ಮಹಾತ್ಮ ಗಾಂಧಿ

1. ಬಾಪೂ ಗಾಂಧೀ

'ಗಾಂಧೀ', ಈ ಜಗತ್ತಿನಲ್ಲೇ ಎಲ್ಲರೂ ಕೇಳಿರುವ ಹೆಸರು. ಗಾಂಧೀಗಳು ಬಹಳ ಜನ ಆಗಿಬಿಟ್ಟಿದ್ದಾರೆ. ಅಲ್ಲವೆ? ಯಾರು ಯಾರು ಹೇಳಿ ನೋಡೋಣ. ಫಿರೋಜ್ ಗಾಂಧೀ, ಇಂದಿರಾ ಗಾಂಧೀ, ಸಂಜಯ್ ಗಾಂಧೀ, ರಾಜೀವ್ ಗಾಂಧೀ, ಇನ್ನೊಂದು ಹೆಸರು ಬಿಟ್ಟುಹೋಗಿದೆ. ಅದೇ ಮಹಾತ್ಮ ಗಾಂಧೀ. ನಮ್ಮ ಬಾಪೂ, ಮೋಹನದಾಸ ಕರಮಚಂದ ಗಾಂಧೀ, ಬಾಪೂ–ಗಾಂಧೀ. ಎಲ್ಲರ ಮನೆಯಲ್ಲೂ ದೇವರ ಫೋಟೋ ಜೊತೆಗೆ ಈ ಗಾಂಧೀ ಫೋಟೋನೂ ಇರುತ್ತದೆ. ಮಕ್ಕಳನ್ನು ಕೇಳಿದರೂ ಹೇಳುತ್ತಾರೆ. ಅವರೇ ಗಾಂಧೀ ತಾತ.

ಬಾಪೂ ಗಾಂಧಿಯನ್ನು ಎಂ. ಕೆ. ಗಾಂಧಿ ಅಂತಲೂ ಕರೆಯುತ್ತಿದ್ದರು. ಚಿಕ್ಕವಯಸ್ಸಿನಲ್ಲಿ ಮೋಹನ್ ಅಂತಲೂ ಕರೆಯುತ್ತಿದ್ದರು. ಚಿಕ್ಕ ವಯಸ್ಸಿನಿಂದಲೂ ಸದ್ಗುಣವುಳ್ಳವರು. ಸತ್ಯ ಮತ್ತು ಅಹಿಂಸೆ (ಪ್ರೀತಿ) ಬಹಳ ಅಚ್ಚುಮೆಚ್ಚು.

2. ಕಾಪಿ ಮಾಡದ ಕಥೆ

12ನೇ ವಯಸ್ಸಿನಲ್ಲಿ ಮೋಹನ್ ಶಾಲೆಯಲ್ಲಿ ಓದುತ್ತಿದ್ದಾಗ ಇಂಗ್ಲಿಷ್ ಕಲಿಯುತ್ತಿದ್ದ. ಚಿಕ್ಕ ವಯಸ್ಸಿನಿಂದಲೂ ಉಪಾಧ್ಯಾಯರ ಮತ್ತು ಸ್ನೇಹಿತರ ಜೊತೆಯಲ್ಲಿಯೂ ಸುಳ್ಳು ಹೇಳುತ್ತಿರಲಿಲ್ಲ.

ಒಂದು ಸಲ ಅವನ ಶಾಲೆಗೆ "ಇನ್‌ಸ್ಪೆಕ್ಟರ್ ಬಂದರು. ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡುವುದಕ್ಕಾಗಿ ಐದು ಪದಗಳನ್ನು ಹೇಳಿ, ಬರೆಸಿದರು.

ಅದರಲ್ಲಿ **Kettle** (ಕೆಟ್ಲ್) ಎಂಬುದು ಒಂದು ಪದ. ಅದನ್ನು ಮೋಹನ್ ತಪ್ಪಾಗಿ ಬರೆದ. ತರಗತಿಯ ಉಪಾಧ್ಯಾಯರು ಅದನ್ನು ನೋಡಿದರು. "ನೀನು ಬರೆದಿರುವುದು ತಪ್ಪು. ನಿನ್ನ ಪಕ್ಕದ ಹುಡುಗ ಸರಿಯಾಗಿ ಬರೆದಿದ್ದಾನೆ. ಅದನ್ನು ನೋಡಿಕೊಂಡು ತಿದ್ದಿಕೋ"



ಕಾಪಿ ಮಾಡು ಎಂದು ಮೋಹನನಿಗೆ ಉಪಾಧ್ಯಾಯರು ಹೇಳುತ್ತಿರುವುದು

ಎಂದು ಮೋಹನ್‌ಗೆ ಸೂಚಿಸುವುದಕ್ಕಾಗಿ, ಅವರು ತಮ್ಮ ಜೋಡಿನ ತುದಿಯಿಂದ ಮೋಹನ್‌ನ ಕಾಲನ್ನು ತಿವಿದರು. ಅವರು ಏಕೆ ತಿವಿದರೆಂದು ಗಾಂಧಿಯವರಿಗೆ ಗೊತ್ತಾಯಿತು. ಆದರೂ ಅವರ ಪಕ್ಕದವನು ಬರೆದುದನ್ನು ನೋಡಿ ತಿದ್ದಿಕೊಳ್ಳಲು ಒಪ್ಪಲಿಲ್ಲ. "ಪದ ಸರಿಯಾಗಿ ಬರೆಯುವುದಕ್ಕೆ ನನಗೆ ಬರುವುದೋ?" ಎಂದು ಇನ್‌ಸ್ಪೆಕ್ಟರ್ ಪರೀಕ್ಷೆ ಮಾಡುತ್ತಿದ್ದಾರೆ. ಪಕ್ಕದವನು ಬರೆದಿರುವುದನ್ನು 'ಕಾಪಿ' ಮಾಡಿ ಸರಿಯಾಗಿ ಬರೆದೆಯೆನಿಸಿಕೊಳ್ಳುವುದು ತಪ್ಪು ಎಂದು ಅವರ ಮನಸ್ಸು ಹೇಳಿತು. ಆದುದರಿಂದ ಅವರು ತಮ್ಮ ಉಪಾಧ್ಯಾಯರ ಸೂಚನೆಯಂತೆ 'ಕಾಪಿ' ಮಾಡಲಿಲ್ಲ.

ಇನ್‌ಸ್ಪೆಕ್ಟರ್ ತಾವು ಬರೆಸಿದ ಪದಗಳನ್ನು ನೋಡಿದರು. ಮಿಕ್ಕ ಹುಡುಗರೆಲ್ಲ ಸರಿಯಾಗಿ ಬರೆದಿದ್ದರು. ಗಾಂಧಿ ಮಾತ್ರ ತಪ್ಪು ಬರೆದಿದ್ದರು.

ಇನ್‌ಸ್ಪೆಕ್ಟರ್ ಹೊರಟುಹೋದ ಮೇಲೆ "ನೀನು ಬರೆದದ್ದು ತಪ್ಪು. ಪಕ್ಕದವನನ್ನು ನೋಡಿಕೋ" ಎಂದು ನಾನು ಸೂಚನೆ ಕೊಟ್ಟರೂ ನೀನು ತಿದ್ದಿಕೊಳ್ಳಲಿಲ್ಲ, ದಡ್ಡ!" ಎಂದು ಉಪಾಧ್ಯಾಯರು ಹೇಳಿದರು.

ಗಾಂಧೀ ಉಪಾಧ್ಯಾಯರಿಗೆ ಎದುರು ಮಾತು ಹೇಳಲಿಲ್ಲ. ನಾನು ದಡ್ಡನಾದೆನಲ್ಲ ಎಂದು ಅವರು ದುಃಖಪಡಲಿಲ್ಲ. ತಾನು ಕಾಪಿ ಮಾಡಲಿಲ್ಲವಲ್ಲ ಎಂದು ಸಂತೋಷಪಟ್ಟರು.

3. ಪ್ರೇಮ ಅಹಿಂಸೆಗಳ ಪಾಠ

ಗಾಂಧಿಯವರ ಪೂರ್ಣ ಹೆಸರು ಮೋಹನದಾಸ ಕರಮಚಂದ ಗಾಂಧಿ. ವ್ಯಾಪಾರಕ್ಕೆ ಹೆಸರಾದ ಮನೆತನದವರು. ಬುದ್ಧಿವಂತರು, ಸತ್ಯವಂತರು. ಇವರ ತಂದೆತಾಯಿಗಳು ಒಳ್ಳೆಯ ಸಜ್ಜನರು, ಧರ್ಮನಿಷ್ಠರು. ಒಳ್ಳೆಯ ನಡತೆ ಉಳ್ಳವರು, ಆದುದರಿಂದಲೇ ಈ ಮನೆತನದಲ್ಲಿ ಹುಟ್ಟಿದ ಗಾಂಧಿಯವರಿಗೆ ಎಳೆತನದಲ್ಲೇ ಈ ಸ್ವಭಾವಗಳು ಕಾಣುತ್ತಿದ್ದವು. ಸತ್ಯ, ನೀತಿ, ಸ್ವಾತಂತ್ರ್ಯದ ಬಯಕೆ ಮೊಳಕೆಯಲ್ಲಿಯೇ ಇತ್ತು. ತಾಯಿ, ತಂದೆಯರ ಸೇವೆ ತುಂಬಾ ಇಷ್ಟ. ಶ್ರವಣ, ಹರಿಶ್ಚಂದ್ರರ ಕಥೆಗಳಲ್ಲಿ ಆಸಕ್ತಿ, ಗುರುಗಳಲ್ಲಿ ತುಂಬಾ ಭಕ್ತಿಯಿತ್ತು.

ಆದರೂ ಚಿಕ್ಕವರಿದ್ದಾಗ ಕೆಲವು ಕೆಟ್ಟ ಆಸೆಗಳಿಗೆ ಸಿಕ್ಕಿಬಿದ್ದರು. ಸಿಗರೇಟು ಸೇದಿ ನೋಡಿದರು. ಇಂಗ್ಲೀಷರನ್ನು ನಮ್ಮ ದೇಶದಿಂದ ಓಡಿಸಲು ಶಕ್ತಿ ಬರಬೇಕಾದರೆ ಮಾಂಸ ತಿನ್ನಲೇಬೇಕೆಂದು ನಂಬಿದರು. ಯಾರಿಗೂ ತಿಳಿಯದಂತೆ ತಿನ್ನಲು ಪ್ರಾರಂಭಿಸಿದರು. ದುಡ್ಡು ಬೇಕಾಯಿತು. ಸ್ನೇಹಿತರಿಂದ ಸಾಲ ಪಡೆದರು. ಅದನ್ನು ಹಿಂತಿರುಗಿಸುವುದು ಹೇಗೆ? ಉಪಾಯ ಕಾಣಲಿಲ್ಲ. ಅಣ್ಣನ ಬಂಗಾರದ ಕೈಬಳೆಯಿಂದ ಒಂದು ಚೂರು ಬಂಗಾರವನ್ನು ಕದ್ದು ಮಾರಿದರು. ಸಾಲ ತೀರಿಸಿದರು.

ಅದೇ ಸಮಯದಲ್ಲಿ ಅವರ ತಂದೆ ಕಾಯಿಲೆಯಿಂದ ಮಲಗಿದ್ದರು. ತಾವು ಮಾಡಿದ ತಪ್ಪು ತಂದೆಗೆ ತಿಳಿದರೆ ಅವರಿಗೆ ವ್ಯಸನವಾಗಬಹುದು, ಆದರೆ ಇದರಿಂದ ಅವರ ಖಾಯಿಲೆ ಹೆಚ್ಚಾಗಬಹುದೆಂದು ಹೆದರಿದರು. ಗಾಂಧಿಯವರೇ ತಂದೆಯ ಬಳಿ ಹೋಗಿ ತಮ್ಮ ತಪ್ಪನ್ನು ಒಪ್ಪಿಕೊಂಡರು. ಆಗ ಅದನ್ನು ಕೇಳಿದ ತಂದೆಯ ಕಣ್ಣುಗಳಲ್ಲಿ "ಕ್ಷಮಾ ಹನಿ" ಸುರಿಯಿತು. ಅದಕ್ಕಿಂತ ಶಿಕ್ಷೆ ಬೇರೆ ಬೇಕೆ? "ಆ ಮಮತೆಯ ಕಣ್ಣೀರು ನನ್ನ ಪಾಪಗಳನ್ನೆಲ್ಲಾ



ಗಾಂಧೀಜಿ ಹದಿನಾಲ್ಕು ವರ್ಷದವರಿದ್ದಾಗ



ತಂದೆಯ ಮಮತೆಯ ಕಣ್ಣೀರು ಅಹಿಂಸೆಯ ಪಾಠ ಕಲಿಸಿತು

ತೊಳೆಯಿತು. ಅಹಿಂಸೆಯ ಪಾಠ ಕಲಿಸಿತು" ಎಂದು ಗಾಂಧಿಯವರೇ ಹೇಳಿದ್ದಾರೆ. ಕೆಟ್ಟ ಕೆಲಸ ಮಾಡುವ ಬುದ್ಧಿ ಅವರನ್ನು ಬಿಟ್ಟಿತು. ಪ್ರೇಮವು ಹೃದಯವನ್ನು ತುಂಬಿತು.

ಇವರಿಗೆ ಮದುವೆ ಆಗಿದ್ದು ಚಿಕ್ಕ ವಯಸ್ಸಿನಲ್ಲೇ. ಕಾಲೇಜಿಗೆ ಹೋಗುವ ಇಷ್ಟವಿರಲಿಲ್ಲ. "ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಆಗಿ ಬಾ. ಇಲ್ಲವಾದರೆ ನಿಮ್ಮ ತಂದೆಯ 'ದಿವಾನರ ಕೆಲಸ' ನಿನಗೆ ಸಿಗುವುದಿಲ್ಲ" ಎಂದು ಕೆಲವರು ಹೇಳಿದರು. ಆದರೆ ಸಮುದ್ರ ಪ್ರಮಾಣ, ವಿದೇಶೀ ಜನರ ಜೊತೆಗೆ ವಾಸ, ಆಗಿನ ಸಮಾಜಕ್ಕೆ ಒಪ್ಪಿಗೆ ಆಗಿರಲಿಲ್ಲ. ಹಾಗೆ ಮಾಡಿದರೆ ಬಹಿಷ್ಕಾರ ಹಾಕುವುದಾಗಿ ಹೆದರಿಸಿದರು. ಗಾಂಧಿ ಇದಕ್ಕೆ ಹೆದರಲಿಲ್ಲ. ಹೆಂಡತಿಯ ಒಡವೆ ಮಾರಿ ಇಂಗ್ಲೆಂಡಿಗೆ ಹೋಗಲು ಸಿದ್ಧರಾದರು. ಪ್ರಯಾಣ ಮಾಡುವುದಕ್ಕೆ ಮುಂಚೆ ತಾಯಿಯ ಆಶೀರ್ವಾದ ಪಡೆದರು. ಪರದೇಶದಲ್ಲಿ 'ಹೆಂಡ, ಹೆಣ್ಣು, ಮಾಂಸ'-ಮೂರನ್ನು ಮುಟ್ಟುವುದಿಲ್ಲವೆಂದು ಆಕೆ ಮಗನಿಂದ ಕೈಮುಟ್ಟಿ ಮಾತು ತೆಗೆದುಕೊಂಡು ಆಶೀರ್ವದಿಸಿ ಕಳುಹಿಸಿಕೊಟ್ಟರು.



ಲಂಡನ್ನಿನಲ್ಲಿ ಗಾಂಧೀಜಿ ವಿದ್ಯಾರ್ಥಿ ದೆಶೆಯಲ್ಲಿ

4. ಎಲ್ಲ ಧರ್ಮ ಒಂದೇ

ಇಂಗ್ಲೆಂಡಿನಲ್ಲಿ ಗಾಂಧೀ ಇಂಗ್ಲೀಷರನ್ನು ಅನುಕರಿಸಲು ಪ್ರಯತ್ನಿಸಿದರು. ಸಂಗೀತ, ನರ್ತನಗಳನ್ನು ಕಲಿಯಲು ಪ್ರಯತ್ನಿಸಿದರು. ಆದರೆ ಇಂತಹ ಬದುಕಿನಲ್ಲಿ ಏನೂ ಸತ್ವವಿಲ್ಲವೆಂದು ತಿಳಿದ ಮೇಲೆ, ಅವುಗಳನ್ನು ಕೈಬಿಟ್ಟರು. ತಾಯಿಗೆ ಕೊಟ್ಟ ಮಾತು ನೆನಪಾಯಿತು. ಸಸ್ಯಾಹಾರವನ್ನೇ ಕುರಿತು ಅಭ್ಯಾಸ ಮಾಡಿದರು.

ಧರ್ಮಶ್ರದ್ಧೆ ಗಾಂಧಿಯವರಲ್ಲಿ ಮೊದಲಿನಿಂದಲೂ ಇತ್ತು. ಅದರ ಫಲವಾಗಿ ಬೇರೆ ಮತಧರ್ಮಗಳನ್ನು ಕುರಿತು ವಿಚಾರಮಾಡುವ ಬುದ್ಧಿ ಅವರಲ್ಲಿ ಬೆಳೆಯತೊಡಗಿತು. ಇಂಗ್ಲೆಂಡಿನಲ್ಲಿದ್ದಾಗ ಗೀತೆ ಮತ್ತು ಇತರ ಧರ್ಮಗ್ರಂಥಗಳನ್ನು ಓದತೊಡಗಿದರು.

ಇಂಗ್ಲೀಷ್ ಜನರು ವಯಸ್ಸಾದ ಮೇಲೆ ಮದುವೆ ಮಾಡಿಕೊಳ್ಳುವ ಪದ್ಧತಿ. ಆದರೆ ಗಾಂಧೀಜಿಯವರಿಗೆ ಚಿಕ್ಕವಯಸ್ಸಿನಲ್ಲೇ ಮದುವೆ ಆಗಿದೆ

ಎಂದು ಹೇಳಿಕೊಳ್ಳಲು ನಾಚಿಕೆ. ಅನೇಕ ಸಾರಿ ಮದುವೆ ಆಗಿಲ್ಲವೆಂದು ಹೇಳುತ್ತಿದ್ದರು. ಆದರೆ ಸುಳ್ಳು ಹೇಳುವುದು ಸರಿಯಲ್ಲವೆಂದು ತಿಳಿದು ನಂತರ ನಿಜವಾದ ವಿಚಾರ ಹೇಳಲು ಪ್ರಾರಂಭಿಸಿದರು.

ಬ್ಯಾರಿಸ್ಟರರಾಗಿ ಭಾರತಕ್ಕೆ ಬಂದಾಗ ಅವರಿಗೆ ಕೇವಲ 22 ವರ್ಷ. ತಾಯಿ ಮೃತರಾಗಿದ್ದರು. ಗಾಂಧಿ ತಮ್ಮ ವಕೀಲವೃತ್ತಿ ಪ್ರಾರಂಭಿಸಿದರು. ರಾಜಕೋಟೆಯಲ್ಲಾಗಲಿ, ಮುಂಬಯಿಯಲ್ಲಾಗಲಿ ಅವರ ವಕೀಲವೃತ್ತಿ ಸರಿಯಾಗಿ ನಡೆಯಲಿಲ್ಲ. ಕಾಥೇವಾಡದಲ್ಲಿ ಜನಜೀವನ ನಾನಾ ಒಳಸಂಚುಗಳಿಂದ ತುಂಬಿಹೋಗಿತ್ತು. ಈ ಪರಿಸ್ಥಿತಿಯಲ್ಲಿ ಇಲ್ಲೇ ನೆಲೆಸುವುದು ಕಷ್ಟವಾಯಿತು. ಇದೇ ವೇಳೆಗೆ ಪೋರ್‌ಬಂದರಿನ ಒಂದು ವ್ಯಾಪಾರ ಸಂಸ್ಥೆ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಸಂಸ್ಥೆಯ ಒಂದು ಮೊಕದ್ದಮೆ ನಡೆಸಲು ಗಾಂಧಿಯವರನ್ನು ವಕೀಲರನ್ನಾಗಿ ನೇಮಿಸಿಕೊಂಡರು. ಅದನ್ನು ವಹಿಸಿಕೊಂಡು ದಕ್ಷಿಣ ಆಫ್ರಿಕಾಗೆ ಹೋದರು. ಆದರೆ ಅಲ್ಲಿಯ ಅವರ ಅನುಭವ ಅಷ್ಟು ಹಿತಕರವಾಗಿರಲಿಲ್ಲ. ಎಲ್ಲೆಲ್ಲೂ ವರ್ಣದ್ವೇಷ ಎದ್ದು ಕಾಣುತ್ತಿತ್ತು. ಅಲ್ಲಿಯ ಸರ್ಕಾರ ಭಾರತೀಯರನ್ನು ಬಹು ಕೀಳಾಗಿ ಕಾಣುತ್ತಿತ್ತು. ಗಾಂಧಿಯವರನ್ನು 'ಕೂಲಿ ಬ್ಯಾರಿಸ್ಟರ್' ಎಂದೇ ಅಲ್ಲಿಯ ಜನ ಕರೆಯುತ್ತಿದ್ದರು.



ರೈಲ್ವೇ ಅಧಿಕಾರಿಗಳು ಗಾಂಧೀಜಿಯವರು ಕಪ್ಪು ಬಣ್ಣದವರೆಂದು ಅವರನ್ನು 1ನೇ ದರ್ಜೆ ಬೋಗಿಯಿಂದ ಹೊರಗೆ ಹಾಕುತ್ತಿರುವುದು

ಒಂದು ಸಾರಿ ಗಾಂಧಿ 'ದರ್ಬಾನ್' ಎಂಬ ಊರಿನಿಂದ 'ಪ್ರಿಟೋರಿಯಾ' ಎಂಬ ಊರಿಗೆ ರೈಲಿನ ಮೊದಲನೆಯ ತರಗತಿಯಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದರು. ಅವರ ಕಪ್ಪುಬಣ್ಣವನ್ನು

ನೋಡಿ ಮೊದಲನೆಯ ತರಗತಿಯ ಟಿಕೆಟ್ ಇದ್ದರೂ ರೈಲ್ವೆ ಅಧಿಕಾರಿಗಳು ಅವರನ್ನು ರೈಲುಗಾಡಿಯಿಂದ ಹೊರಕ್ಕೆ ತಳ್ಳಿದರು. ಇನ್ನೊಂದು ಸಾರಿ ಇವರು ಕೋಚ್ ಗಾಡಿಯಲ್ಲಿ ಪ್ರಯಾಣ ಮಾಡಿದರು. ಗಾಡಿಯ ಬಿಳಿಯ ಬಣ್ಣದ ಕಂಡಕ್ಟರ್ ಗಾಂಧಿಯನ್ನು ತನ್ನ ಕಾಲಿನ ಬಳಿ ಕುಳಿತುಕೊಳ್ಳಲು ಒಪ್ಪಲಿಲ್ಲ. ಗಾಂಧಿಯವರನ್ನು ಎಳೆದಾಡಿ ಹೊಡೆದರು. ಆದರೂ ತಮ್ಮನ್ನು ಹೊಡೆದವರ ಮೇಲೆ ಪೋಲೀಸರಿಗೆ ಗಾಂಧಿ ದೂರು ಕೊಡಲಿಲ್ಲ.

5. ಜನಸೇವೆ

ದಕ್ಷಿಣ ಆಫ್ರಿಕಾದಲ್ಲಿ ಬೇರೆ ಬೇರೆ ಜಾತಿಯ ಭಾರತೀಯರಿದ್ದರು. ಅವರನ್ನೆಲ್ಲಾ ಗಾಂಧಿ ಕ್ರಮವಾಗಿ ಒಂದುಗೂಡಿಸಿದರು. ಸತ್ಯನಿಷ್ಠೆ, ಒಗ್ಗಟ್ಟು, ವ್ಯವಹಾರ ನೀತಿ ಮುಂತಾದುವನ್ನು ಅವರಿಗೆ ಕಲಿಸಿ ಎಲ್ಲರನ್ನು ಅಣ್ಣತಮ್ಮಂದಿರಂತೆ ನೋಡಲು ಪ್ರಾರಂಭಿಸಿದರು. ಇದರಿಂದ ಅವರ ಮನಸ್ಸು ಉದಾರವಾಯಿತು. ಬೇರೆ ಬೇರೆ ಧರ್ಮಗಳ ಭಾರತೀಯರ ಪರಿಚಯವಿತ್ತು. ಇತರ ಧರ್ಮಗಳಲ್ಲಿ ಸಹಾನುಭೂತಿಯೂ ಇತ್ತು. ಇವುಗಳನ್ನು ತಿದ್ದಿಕೊಳ್ಳಲು ಬೈಬಲ್, ಕುರಾನ್, ಉಪನಿಷತ್, ಝುರತುಷ್ಟನ ವಚನಗಳು ಹಾಗೂ ಟಾಲ್‌ಸ್ಟಾಯ್ ಅವರ ಗ್ರಂಥಗಳನ್ನು ಓದಿದರು.



ದರ್ಬಾನಿನಲ್ಲಿ ಗಾಂಧೀಜಿಗೆ ಸತ್ಕಾರ ಸಮಾರಂಭ

ಒಂದು ದಿನ ಮೊಕದ್ದಮೆಯಲ್ಲಿ ವಾದಿಸಲು ಗಾಂಧಿ ದಕ್ಷಿಣ ಆಫ್ರಿಕಾಗೆ ಹೋಗಿದ್ದು, ಕೊನೆಯಲ್ಲಿ ಎರಡು ಪಕ್ಷಗಳಿಗೂ ರಾಜಿ ಮಾಡಿಸಿ, ಭಾರತಕ್ಕೆ ಹಿಂದಿರುಗಲು ಸಿದ್ಧರಾದರು. ಇವರನ್ನು ಬೀಳ್ಕೊಡಲು ದರ್ಬಾನಿನಲ್ಲಿ ಒಂದು ಸತ್ಕಾರ ಸಮಾರಂಭ ನಡೆಯಿತು. ಆ ಸಮಾರಂಭದಲ್ಲಿ ಗಾಂಧಿ "ನೇಟಾಲ್ ಮರ್ಕ್ಯುರಿ" ದಿನಪತ್ರಿಕೆ ಹಿಡಿದುಕೊಂಡು ಕುಳಿತಿದ್ದರು. ಅದರಲ್ಲಿ ಒಂದು ಸುದ್ದಿ ಕಾಣಿಸಿತು. ದಕ್ಷಿಣ ಆಫ್ರಿಕಾ ಪಾರ್ಲಿಮೆಂಟಿನ ಮುಂದೆ "ಭಾರತೀಯರ ಮತ ದಾನದ ಹಕ್ಕು ಕಸಿದುಕೊಳ್ಳುವ ಒಂದು ಮಸೂದೆ" ಬರುತ್ತದೆ ಎಂಬುದೇ ಆ ಸುದ್ದಿ. ಈ ಮಸೂದೆ ಕಾನೂನಾದರೆ ಅಲ್ಲಿಯ ಭಾರತೀಯರಿಗೆ ಒಂದು ದೊಡ್ಡ ಪೆಟ್ಟು. ಎಂಬ ಸುದ್ದಿಯನ್ನು ಗಾಂಧಿ ಓದಿ, ಅಲ್ಲಿದ್ದ ಕೆಲವರಿಗೆ ತಿಳಿಸಿದರು. ಈ ಮಸೂದೆಯಿಂದಾಗುವ ದುಷ್ಪರಿಣಾಮ ಎಲ್ಲರಿಗೂ ಅರ್ಥವಾಯಿತು. ಆಗ ಗಾಂಧಿ, ದಕ್ಷಿಣ ಆಫ್ರಿಕಾದಲ್ಲೇ ನಿಲ್ಲಬೇಕು; ಇಂತಹ ಕಷ್ಟ ಸಮಯದಲ್ಲಿ ತಿಳುವಳಿಕೆ ಕೊಡಬೇಕು; ದಾರಿ ತೋರಿಸಬೇಕು ಎಂದು ಕೇಳಿಕೊಂಡರು. ಗಾಂಧಿ ಕೂಡಲೇ ಒಪ್ಪಿದರು. ಪ್ರಯಾಣ ಮಾಡುವ ಯೋಚನೆ ಕೈಬಿಟ್ಟರು. ಜನರ ಸೇವೆಗಾಗಿ ಅಲ್ಲಿಯೇ ನಿಂತರು.

ಇಲ್ಲಿಯ ಜನರ ಸೇವೆಯನ್ನು ಶ್ರದ್ಧೆಯಿಂದ ಮಾಡಿದರು. ವಕೀಲ ವೃತ್ತಿಯಿಂದ ಒಳ್ಳೆಯ ಸಂಪಾದನೆ ಇತ್ತು. ಆದರೂ ಭಾರತೀಯರನ್ನು ಒಗ್ಗೂಡಿಸಬೇಕು, ಅವರ ಸ್ಥಿತಿಗತಿಗಳು ಉತ್ತಮ ಆಗಬೇಕೆಂಬ ಹಂಬಲ ಬಲಗೊಂಡಿತು. ತಮ್ಮ ಶಕ್ತಿಯನ್ನೆಲ್ಲಾ ಜನಸೇವೆಗೆ ಉಪಯೋಗಿಸತೊಡಗಿದರು. ಜನರನ್ನು ತಿದ್ದುವ ಇವರ ರೀತಿ ಬಹು ಕಟ್ಟುನಿಟ್ಟು. ಸರಕಾರದ ವಿರುದ್ಧ ಒಂದು ಅರ್ಜಿ ತಯಾರಿಸಿದರು. ಅದಕ್ಕೆ ಸಾವಿರಾರು ಭಾರತೀಯರ ಸಹಿ ಹಾಕಿಸಿದರು. ಜನರಿಗೆ ರಾಜಕೀಯ ಜಾಗೃತಿ ಮೂಡುವಂತೆ ಮಾಡಿದರು.

ನೇಟಾಲ್ ಇಂಡಿಯನ್ ಕಾಂಗ್ರೆಸ್ ಮತ್ತು ಭಾರತೀಯ ಯುವಕರ ಹಿತರಕ್ಷಣೆಗಾಗಿ "ನೇಟಾಲ್ ವಿದ್ಯಾಸಂಘ"ವೂ ಪ್ರಾರಂಭವಾಯಿತು. ನೇಟಾಲಿನ ಭಾರತೀಯರಿಗೆ ಸೇವೆ ಸಲ್ಲಿಸುವ ಕಾಲದಲ್ಲಿ ಉರ್ದು, ತಮಿಳು ಭಾಷೆಗಳನ್ನು ಅಭ್ಯಾಸ ಮಾಡಿದರು.

6. ಕರುಣೆ

ದಕ್ಷಿಣ ಆಫ್ರಿಕಾದಲ್ಲಿ ತನ್ನ ಜೀವಮಾನವನ್ನು ಪ್ರಾರಂಭಿಸಿದ್ದೇನೆ ಎಂದು ಗಾಂಧಿಯವರಿಗೆ ಅನ್ನಿಸಿತು. ಇದರಿಂದ ನೇಟಾಲಿನಲ್ಲಿಯೇ ನೆಲಸಬೇಕೆಂದು ತೀರ್ಮಾನಿಸಿದರು. ಹೆಂಡತಿ ಮತ್ತು ಮಕ್ಕಳನ್ನೂ ಕರೆತರಲು ಭಾರತಕ್ಕೆ ಬಂದರು.

ಗಾಂಧಿ ಭಾರತದಲ್ಲಿ ಕೆಲವು ದಿನ ನಿಂತರು. ರಾಜಕೀಯವಾಗಿ ಬಹಳ ಮಹತ್ವದ ಕಾಲ ಅದು. ಅವರು ಕೆಲವು ಭಾಷಣಗಳನ್ನೂ ಮಾಡಿದರು. ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರ ಜೀವನವನ್ನು ಕುರಿತು ಒಂದು ಪುಸ್ತಕ ಬರೆದು ಮುದ್ರಿಸಿ ಹಂಚಿದರು. ಇದೇ ಸಮಯದಲ್ಲಿ ವಿಕ್ಟೋರಿಯಾ ರಾಣಿಯ ವಜ್ರಮಹೋತ್ಸವಕ್ಕೆ ಸಿದ್ಧತೆ ನಡೆಯುತ್ತಿತ್ತು. ಗಾಂಧಿ ಅದರಲ್ಲಿ ಉತ್ಸಾಹದಿಂದ ಭಾಗವಹಿಸಿದರು.

ಗಾಂಧಿ ಹೆಂಡತಿ, ಮಕ್ಕಳೊಂದಿಗೆ ದಕ್ಷಿಣ ಆಫ್ರಿಕಾಕ್ಕೆ ಹಿಂದಿರುಗಿದರು. ಭಾರತದಲ್ಲಿ ಪ್ರಕಟಿಸಿದ ಪುಸ್ತಕದ ಸಾರಾಂಶವನ್ನು ಇಲ್ಲಿಯ ಪತ್ರಿಕೆಗಳು ತಿರುಗು ಮುರುಗು ಮಾಡಿ ಪ್ರಕಟಿಸಿದ್ದವು. ಇದರಿಂದ ಇಲ್ಲಿಯ ಬಿಳಿಯ ಜನರಿಗೆ ಗಾಂಧಿ ಮೇಲೆ ತುಂಬಾ ಕೋಪ ಬಂದಿತು. ಭಾರತದಿಂದ ದರ್ಬಾನಿಗೆ ಗಾಂಧಿ ಬಂದರು. ಹಡಗಿನಿಂದ ಇಳಿದ ಕೂಡಲೇ ಬಿಳಿಯ ಜನ, ಇವರ ಮೇಲೆ ದಾಳಿ ಮಾಡಿದರು. ದಾಳಿ ಮಾಡಿದವರ ಮೇಲೆ ಮೊಕದ್ದಮೆ ಹೂಡಲು ಅಲ್ಲಿಯ ಸರ್ಕಾರ ಗಾಂಧೀಜಿಯವರಿಗೆ ತಿಳಿಸಿತು. ಆದರೆ ಗಾಂಧಿ ಒಪ್ಪಲಿಲ್ಲ. "ನನ್ನ ಮೇಲೆ ಕೈಮಾಡಿದವರದು ತಪ್ಪೆಂದು ನನಗೆ ತೋರುವುದಿಲ್ಲ. ಇದು ಬಿಳಿಯ ನಾಯಕರ ಮುಖ್ಯವಾದ ತಪ್ಪು" ಎಂದು ಬ್ರಿಟಿಷ್ ಸರ್ಕಾರಕ್ಕೆ ಪತ್ರ ಬರೆದರು. ಇದು ಗಾಂಧಿಯ ಗೌರವವನ್ನು ಹೆಚ್ಚಿಸಿತು ಮತ್ತು ಜನರು ತಮ್ಮ ಕೃತ್ಯದ ಬಗ್ಗೆ ವಿಷಾದ ವ್ಯಕ್ತಪಡಿಸುವಂತಾಯಿತು.

ದಕ್ಷಿಣ ಆಫ್ರಿಕಾದಲ್ಲಿ "ಬೋಅರ್" ಯುದ್ಧ ಆರಂಭವಾಯಿತು. ಗಾಂಧಿ ಈ ಯುದ್ಧದಲ್ಲಿ ಭಾಗವಹಿಸಿದರು. ಬೋಅರ್ ಜನರ ಬಗ್ಗೆ ಸಹಾನುಭೂತಿ ಇತ್ತು. ಯುದ್ಧದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ಮಾಡುವ ಒಂದು ಪಡೆಯನ್ನು ಕಟ್ಟಿದರು. ಸೈನ್ಯದ ಅಧಿಕಾರಿಗಳು ಇವರ ಸೇವೆಯನ್ನು ಮೆಚ್ಚಿಕೊಂಡರು.

ಇನ್ನು ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಕೆಲಸ ಮುಗಿಯಿತೆಂದು ತಿಳಿದು ಗಾಂಧಿ ಭಾರತಕ್ಕೆ ಹಿಂದಿರುಗಲು ನಿಶ್ಚಯಿಸಿದರು. ಇವರ ಸೇವೆ ಮೆಚ್ಚಿದ ಜನ ಇವರಿಗೆ ಚಿನ್ನ, ಬೆಳ್ಳಿ ಹಾಗೂ ವಜ್ರಗಳನ್ನು ಉಡುಗೊರೆಯಾಗಿ ಕೊಟ್ಟರು. ಗಾಂಧಿ ಇವುಗಳಾವುದನ್ನು ಮುಟ್ಟಲಿಲ್ಲ. ಜನಸೇವೆ ಮಾಡಿದ್ದಕ್ಕೆ ಪ್ರತಿಯಾಗಿ ಏನನ್ನೂ ಸ್ವೀಕರಿಸುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿ ಭಾರತಕ್ಕೆ ಹಿಂದಿರುಗಿದರು.

7. ಆತ್ಮಶಕ್ತಿ

ಭಾರತಕ್ಕೆ ಬಂದ ಮೇಲೆ ಗಾಂಧಿ ಎಲ್ಲಾ ನಾಯಕರನ್ನು ಭೇಟಿ ಮಾಡಿದರು. ಕಲ್ಕತ್ತದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಸ್ವಯಂ ಸೇವಕರಾಗಿ ಕೆಲಸ ಮಾಡಿದರು. ಆಗ ಅಧಿವೇಶನದ ಚರ್ಚೆಗಳು ಇಂಗ್ಲೀಷ್ ಭಾಷೆಯಲ್ಲಿ ನಡೆಯುತ್ತಿದ್ದವು. ಅದನ್ನು ಕಂಡ ಗಾಂಧಿಯವರಿಗೆ ವ್ಯಥೆಯಾಯಿತು.

ಗಾಂಧೀಯವರಿಗೆ ಗೋಪಾಲಕೃಷ್ಣ ಗೋಖಲೆಯವರಲ್ಲಿ ತುಂಬಾ ಗೌರವ ಮತ್ತು ಅಭಿಮಾನವಿತ್ತು. ಗೋಖಲೆಯವರೂ ಗಾಂಧಿಯವರನ್ನು



ಜುಲೂ ಕ್ರಾಂತಿಯ ಕಾಲದಲ್ಲಿ ಭಾರತೀಯ ಸೈನ್ಯ ಶುಶ್ರುಷಾ ತಂಡದಲ್ಲಿ ಗಾಂಧೀಜಿ



ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹಿ ಗಾಂಧೀಜಿ

ಪ್ರೀತಿ, ವಿಶ್ವಾಸದಿಂದ ಕಾಣುತ್ತಿದ್ದರು. ಗಾಂಧಿ ಮುಂಬಯಿಯಲ್ಲಿ ನೆಲೆಸಿ, ವಕೀಲ ವೃತ್ತಿ ಪ್ರಾರಂಭಿಸಿದರು. ಅಷ್ಟು ಹೊತ್ತಿಗೆ ದಕ್ಷಿಣ ಆಫ್ರಿಕಾಗೆ ಬೇಗ ಹಿಂದಿರುಗಬೇಕೆಂದು ಅಲ್ಲಿಯ ಭಾರತೀಯರಿಂದ ಕರೆ ಬಂತು. ತಕ್ಷಣ ಹೊರಟರು.

ದಕ್ಷಿಣ ಆಫ್ರಿಕಾಕ್ಕೆ ಬಂದ ಕೂಡಲೆ ಎರಡು ಕೆಲಸಗಳನ್ನು ಪ್ರಾರಂಭಿಸಿದರು. ಭಾರತೀಯರ ಸಂಘಟನೆಗಾಗಿ ರಚನಾತ್ಮಕ ಕಾರ್ಯ, ಆತ್ಮಗೌರವ ಹಾಗೂ ರಾಜಕೀಯ ಜೀವನ ರಕ್ಷಣೆಗಾಗಿ ವಿರೋಧ ಶಕ್ತಿಯನ್ನೆದುರಿಸಿ, ನಡೆಸಬೇಕಾದ ಹೋರಾಟ, ಜೊತೆಗೆ ಅನ್ಯಾಯ, ಅವಮಾನಗಳನ್ನು ಎದುರಿಸಿ ಹೋರಾಡಲು ಸತ್ಯಾಗ್ರಹಿಗೆ ಬೇಕಾದ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳುವುದು. ಅದಕ್ಕಾಗಿ ಆತ್ಮಸಂಯಮ ದೇಹ ದಂಡನೆ.

"ಇಂಡಿಯನ್ ಒಪಿನಿಯನ್" ಎಂಬ ವಾರಪತ್ರಿಕೆಯನ್ನು ತೆಗೆದುಕೊಂಡು, ಇಂಗ್ಲೀಷ್, ಹಿಂದೂಸ್ತಾನಿ, ಗುಜರಾತಿ ಮತ್ತು ತಮಿಳು ಭಾಷೆಗಳಲ್ಲಿ ನಡೆಸಿದರು. ರಸ್ಕಿನ್ನನ "ಅನ್ ಟು ದಿಸ್ ಲಾಸ್ಟ್" ಗ್ರಂಥವನ್ನು "ಸರ್ವೋದಯ" ಎಂಬ ಹೆಸರಿನಲ್ಲಿ ಗುಜರಾತಿಗೆ ಭಾಷಾಂತರಿಸಿದರು.

‘ಆರೋಗ್ಯ ಕೈಪಿಡಿ’, ‘ನೀತಿಧರ್ಮ’, ‘ಹಿಂದ್ ಸ್ವರಾಜ್ಯ’ ಎಂಬ ಉಪಯುಕ್ತ ಸಣ್ಣ ಪುಸ್ತಕಗಳನ್ನು ಪ್ರಕಟಿಸಿದರು. ಈ ರೀತಿ ಜನರಲ್ಲಿ ಸಂಘಟನೆ ಮತ್ತು ರಾಜಕೀಯ ಪ್ರಜ್ಞೆ ಮೂಡುವಂತೆ ಪ್ರಯತ್ನಿಸಿದರು. ಈ ಕಾರ್ಯಗಳನ್ನು ನೋಡಿ, ಗಾಂಧಿಯವರನ್ನು ಸೋದರನಂತೆ ಕಾಣಲು ಪ್ರಾರಂಭಿಸಿದರು. ಇವರ ಕೆಲಸದಲ್ಲಿ ಜೊತೆಗೂಡಿ ದುಡಿಯಲು ಎಲ್ಲರೂ ಒಂದಾದರು.

ಈ ವೇಳೆಗೆ ಗಾಂಧಿಯವರು ಬ್ರಹ್ಮಚರ್ಯ ವ್ರತ ಕೈಗೊಂಡರು. ಅದಕ್ಕೆ ಪೋಷಕವಾಗಿ ಹಾಲು, ಮಸಾಲೆ, ಉಪ್ಪು ಮತ್ತು ಧಾನ್ಯ ಪದಾರ್ಥಗಳನ್ನು ಬಿಟ್ಟರು. ಆಗಾಗ ಉಪವಾಸ ಮಾಡಲು ಪ್ರಾರಂಭಿಸಿದರು.

ಜೂಲೂ ಜನರು ಸರ್ಕಾರಕ್ಕೆ ತೆರಿಗೆ ಕೊಡುವುದನ್ನು ನಿಲ್ಲಿಸಿ ಒಂದು ಚಳುವಳಿಯನ್ನು ಪ್ರಾರಂಭಿಸಿದರು. ಇದನ್ನು ಸರ್ಕಾರ “ದಂಗೆ” ಎಂದು ಕರೆಯಿತು. ಸರಕಾರ ಜೂಲೂಗಳನ್ನು ಬೇಟೆಯಾಡಿ ಕೊಂದರು. ಇದು ಗಾಂಧಿಯವರಿಗೆ ತುಂಬ ದುಃಖ ಉಂಟುಮಾಡಿತು. ಗಾಯಗೊಂಡು ನೊಂದವರಿಗೆ ಶುಶ್ರೂಷೆ ಏರ್ಪಾಡು ಮಾಡಿದರು ಗಾಂಧಿ.



ದೇಶಿ ಉಡುಪಿನಲ್ಲಿ ಗಾಂಧಿ



ಸಬರಮತಿ ಆಶ್ರಮ

8. ಸತ್ಯ-ಅಹಿಂಸೆ

ಫಿನಿಕ್ಸ್ ನಗರದಲ್ಲಿದ್ದ ಅವರ ಮನೆ, ಆಶ್ರಮ, ಮನೆಗೆ ಬರುತ್ತಿದ್ದ ಅತಿಥಿಗಳ ಸೇವೆ, ರೋಗಿಗಳ ಚಿಕಿತ್ಸೆಯೇ ಒಂದು ದೊಡ್ಡ ಕೆಲಸ. ಪ್ರಕೃತಿ ಚಿಕಿತ್ಸೆಯನ್ನು ಮಾಡುವ ಪ್ರಯೋಗವನ್ನು ಇಲ್ಲಿ ನಡೆಸಿದರು. ತಮ್ಮ ಮತ್ತು ತಮ್ಮ ಜೊತೆಗಾರರ ಮಕ್ಕಳ ಶಿಕ್ಷಣ ಜವಾಬ್ದಾರಿ ತಾವೇ ಹೊತ್ತರು. ಬುದ್ಧಿವಂತ ಮಕ್ಕಳ ವಿದ್ಯಾಭ್ಯಾಸಕ್ಕೆ ತಾವೇ ಹಣ ಖರ್ಚುಮಾಡಿದರು. ದಕ್ಷಿಣ ಆಫ್ರಿಕಾದಲ್ಲಿಯೇ ನಿಂತು, ತಮ್ಮ ಕೆಲಸವನ್ನು ಈ ಯುವಕರು ನಡೆಸಿಕೊಂಡು ಹೋಗಬೇಕೆಂದು ಗಾಂಧಿಯವರ ಆಸೆ.

ರಸ್ಕಿನ್ನನ 'ಅನ್ ಟು ದಿಸ್ ಲಾಸ್ಟ್', ಸರ್ವೋದಯ ಗ್ರಂಥವನ್ನು ಓದಿ ಗಾಂಧಿಯವರು ಚಿಂತಿಸುತ್ತಿದ್ದರು. ತನ್ನ ಅನಿಸಿಕೆಗಳನ್ನು ಆ ರೀತಿ ಆಧ್ಯಾತ್ಮಿಕವಾಗಿ ತಿದ್ದಿ ಬೆಳೆಸಿಕೊಳ್ಳಬೇಕೆಂದು ಹಂಬಲ ಬೆಳೆಯಿತು. ದಕ್ಷಿಣ ಆಫ್ರಿಕಾಗಳಲ್ಲಿನ ಭಾರತೀಯರ ಸಮಸ್ಯೆಗಳನ್ನು ಕುರಿತು ಆಲೋಚಿಸುತ್ತಿದ್ದರು. ಇದರ ಫಲವಾಗಿ ಹೊಸದೊಂದು ಜೀವನತತ್ವ ರೂಪುಗೊಂಡಿತು. ಸತ್ಯ-ಅಹಿಂಸೆಗಳ ತಳಹದಿಯ ಮೇಲೆ ಸಮಾಜ ರಚಿಸಬೇಕೆಂದು ಯೋಚಿಸಿದರು. ಗಾಂಧಿಯವರು ತಮ್ಮ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ ಇದನ್ನು ವಿವರಿಸಿದ್ದಾರೆ.

ದಕ್ಷಿಣ ಆಫ್ರಿಕಾದ ಬಿಳಿಯ ಜನರು ಕಪ್ಪು ಜನರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು. ಗಾಂಧಿಯವರು ಸತ್ಯ, ಅಹಿಂಸೆ ಮಾರ್ಗದಲ್ಲಿ ಇದನ್ನು ಎದುರಿಸಿದರು. ಈ ಹೋರಾಟ 'ಸತ್ಯಾಗ್ರಹ' ಹುಟ್ಟಲು ಕಾರಣವಾಯಿತು. ಆಗ ಉಂಟಾದ ಅನೇಕ ಕಷ್ಟಗಳನ್ನು ಸಹಿಸಿಕೊಂಡರು. ಕೊನೆಗೆ ಜಯವಾಯಿತು. ಭಾರತೀಯರ ಮೇಲೆ ಹೇರಿದ್ದ ತಲೆಗಂದಾಯ, ಅವರ ವಿರುದ್ಧ ಜಾರಿ ಮಾಡಿದ್ದ ಕೆಟ್ಟ ಕಾನೂನುಗಳು ರದ್ದಾದವು.

ಮಹಿಳೆಯರು ಈ ಹೋರಾಟದಲ್ಲಿ ಭಾಗವಹಿಸಿದರು. ಗಾಂಧಿಯವರ ಪತ್ನಿ ಕಸ್ತೂರಿಬಾ ಇದರ ಮುಂದಾಳತ್ವ ವಹಿಸಿದರು. ಇವರು ಸಹಿಸಿದ ಕಷ್ಟ, ಮಾಡಿದ ತ್ಯಾಗ ಅಪಾರ. ಭಾರತೀಯರಿಗೆ ಈ ಹೋರಾಟ ಒಂದು ಹೊಸ ಶಕ್ತಿ ಕೊಟ್ಟಿತು. ಹೊಸ ಆಸೆ ಮೂಡಿತು. ಇದು ಭಾರತಕ್ಕೂ ಹಬ್ಬಿತು. ಶಸ್ತ್ರ ಬಲವಿಲ್ಲದೆ, ವಿದ್ಯಾವಂತರಲ್ಲದ ಜನರೂ ಕೂಡ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಬಹುದು. ಇದರಿಂದ ಇಂಗ್ಲೀಷರ ದಬ್ಬಾಳಿಕೆಯನ್ನು ಎದುರಿಸಿ ಸ್ವಾತಂತ್ರ್ಯ ಗಳಿಸಬಹುದು ಎಂಬ ನಂಬಿಕೆ ದೃಢವಾಯಿತು. ತಮ್ಮ ಬದುಕನ್ನು ಭಾರತದ ಪೂರ್ಣಸ್ವರಾಜ್ಯ ಸಾಧನೆಗಾಗಿ ಮೀಸಲಿಡಬೇಕೆಂದು ಧೀರಸಂಕಲ್ಪ ಮಾಡಿ, ಭಾರತಕ್ಕೆ ಹಿಂದಿರುಗಿದರು.

25 ವರ್ಷಗಳ ಹಿಂದೆ ಇಂಗ್ಲಿಷರ ನಡೆ–ನುಡಿ ಅನುಕರಿಸಲು ಆಸೆಪಟ್ಟಿದ್ದರು. ಕ್ರಮೇಣ ಆ ಹುಚ್ಚು ಬಿಟ್ಟುಹೋಯಿತು. ಕಾಥೇವಾಡದ



ಗಾಂಧೀಜಿಯವರು ರಾಜೇಂದ್ರ ಪ್ರಸಾದರೊಡನೆ

ಅಂಗರೇಕು, ಧೋತರ ಮತ್ತು ರುಮಾಲು ಅವರ ನಿತ್ಯದ ಉಡುಪಾಯಿತು. ತೀರಾ ಸಾದಾ ರೀತಿಯ ತಮ್ಮ ನಿತ್ಯಜೀವನವನ್ನು ನಡೆಸಲು ಪ್ರಾರಂಭಿಸಿದರು. ಭಾರತದ ಸ್ಥಿತಿಗತಿಗಳನ್ನು ಚೆನ್ನಾಗಿ ಅಭ್ಯಸಿಸಲು ಪ್ರಾರಂಭಿಸಿದರು.

9. ವ್ರತ ಪರಿಪಾಲನೆ

ಗಾಂಧಿಯವರು ಅಹಮದಾಬಾದಿನ ಹತ್ತಿರ ಸಾಬರಮತಿ ನದಿಯ ದಂಡೆಯ ಮೇಲೆ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿದರು. ಭಾರತವನ್ನೆಲ್ಲಾ ಸಂಚರಿಸಿ, ಜನರ ಸ್ಥಿತಿಗತಿಗಳನ್ನು ಸ್ವತಃ ತಿಳಿದುಕೊಂಡು ಬಂದರು. ಕವಿ ರವೀಂದ್ರನಾಥ ಠಾಕೂರರು ಮತ್ತು ಸ್ವಾಮಿ ಶ್ರದ್ಧಾನಂದರ ಸ್ನೇಹ ಬೆಳೆಸಿಕೊಂಡರು.

ಸತ್ಯಾಗ್ರಹ ಆಶ್ರಮ ಒಂದು ದೊಡ್ಡ ಪ್ರಯೋಗ ಶಾಲೆಯಾಯಿತು. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ತೇಯ, ಅಪರಿಗ್ರಹ, ಏಕಾದಶ ವ್ರತಗಳು ಆಶ್ರಮದ ಗುರಿಯಾದವು. ಸತ್ಯಾಗ್ರಹಿಗಳನ್ನು ತಯಾರಿಸುವ ತರಬೇತಿ ಶಾಲೆಯಾಯಿತು. ರಚನಾತ್ಮಕ ಕೆಲಸಗಳ ಪ್ರಸಾರಕ್ಕೆ ಒಂದು ಜೀವ ಕೇಂದ್ರವಾಯಿತು. ದೇಶದಲ್ಲಿ ತಲೆದೋರುತ್ತಿದ್ದ ಅನ್ಯಾಯಗಳ ವಿರುದ್ಧ ಸತ್ಯಾಗ್ರಹಗಳನ್ನು ನಡೆಸಿದರು.

ಭಾರತೀಯರನ್ನೂ 'ಫಿಜಿ' ದ್ವೀಪಕ್ಕೆ ಕೂಲಿಗಳನ್ನಾಗಿ ಕೆಲಸಕ್ಕೆ ಕಳುಹಿಸುತ್ತಿದ್ದರು. ಅಲ್ಲಿ ಯಜಮಾನರಿಗೆ ಗುಲಾಮರಂತೆ ಕೆಲಸ ಮಾಡುತ್ತಿದ್ದರು. ಈ ಕೆಟ್ಟಪದ್ಧತಿಯ ವಿರುದ್ಧ ಗಾಂಧಿಯವರು ಒಂದು ಎಚ್ಚರಿಕೆ ಕೊಟ್ಟರು. ಇದರ ಪರಿಣಾಮವಾಗಿ ಈ ಪದ್ಧತಿ ರದ್ದಾಯಿತು.

ಬಿಹಾರದ ಚಂಪಾರಣ್ಯದಲ್ಲಿ ನೀಲಿಯ ಭೂಮಾಲೀಕರು ರೈತರಿಗೆ ತುಂಬಾ ಹಿಂಸೆ ಕೊಡುತ್ತಿದ್ದರು, ಅನ್ಯಾಯ ಮಾಡುತ್ತಿದ್ದರು. ಗಾಂಧಿಯವರು ಅಲ್ಲಿಗೆ ಹೋದರು. ಆ ಸರ್ಕಾರ ಇವರನ್ನು ಅಲ್ಲಿಂದ ಬಿಟ್ಟುಹೋಗಲು ಆಜ್ಞಾಪಿಸಿತು. ಗಾಂಧಿ ಅವರು ಅದನ್ನು ಮನ್ನಣೆಗೆ ತೆಗೆದುಕೊಳ್ಳಲಿಲ್ಲ. ಈ ಬಡ ರೈತರ ಮಧ್ಯದಲ್ಲಿ ಕಾರ್ಯಕರ್ತರ ಸಹಾಯದಿಂದ ರಚನಾತ್ಮಕ ಕಾರ್ಯ ಕೈಗೊಂಡರು. ದಬ್ಬಾಳಿಕೆಯನ್ನು ಎದುರಿಸುವ ಧೈರ್ಯ ಆ ಜನರಲ್ಲಿ


ಬೆಳೆಯಿತು. ಆಗ ಸರ್ಕಾರ ಬೇರೆ ಮಾರ್ಗವಿಲ್ಲದೆ ತನಿಖೆಗೆ ಏರ್ಪಾಡು ಮಾಡಿತು. ಇದರ ಫಲವಾಗಿ ರೈತರು ಹಾಗೂ ಕೂಲಿಗಳಿಗೆ ಕೊಡುತ್ತಿದ್ದ ತೊಂದರೆಗಳು ತಪ್ಪಿದವು.

ಅದೇ ಪ್ರಾಂತದವರಾದ ಬಾಬು ರಾಜೇಂದ್ರ ಪ್ರಸಾದ ಅವರು ಚೆನ್ನಾಗಿ ನಡೆಯುತ್ತಿದ್ದ ತಮ್ಮ ವಕೀಲವೃತ್ತಿಯನ್ನು ಬಿಟ್ಟು ಗಾಂಧಿ ಅವರ ಅನುಯಾಯಿಗಳಾದರು. ದೇಶಸೇವೆಯ ದೀಕ್ಷೆ ತೆಗೆದುಕೊಂಡರು.

ಗುಜರಾತಿನ ಖೇಡಾ ಜಿಲ್ಲೆಗಳಲ್ಲಿ ಮಳೆಯಿಲ್ಲದೆ ಬರಗಾಲ ಬಂತು. ಕಂದಾಯ ವಸೂಲಿ ಮಾಡಬಾರದೆಂದು ರೈತರು ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಮನವಿಯನ್ನು ನಿರಾಕರಿಸಿದರು. ಗಾಂಧಿ ಅವರ ಮುಂದಾಳತ್ವದಲ್ಲಿ ರೈತರು ಸತ್ಯಾಗ್ರಹ ಮಾಡಿದರು, ಜಯ ದೊರಕಿತು. ಸರದಾರ ವಲ್ಲಭಬಾಯಿ ಪಟೇಲರು ಗಾಂಧಿ ಅವರ ಜೊತೆಗೂಡಿದ್ದು ಈ ಸಮಯದಲ್ಲಿಯೇ ಮುಂದೆ ರಾಷ್ಟ್ರದ ನಾಯಕರಾದರು.

10. ಅಸಹಕಾರ

ಖೇಡಾ ಸತ್ಯಾಗ್ರಹ ನಡೆದಾಗ ಯುರೋಪಿನಲ್ಲಿ ಮೊದಲ ಮಹಾಯುದ್ಧ ಪ್ರಾರಂಭವಾಯಿತು. ನೆರವಿಗಾಗಿ ವೈಸರಾಯರು ಯುದ್ಧದ ಸಹಾಯಕ್ಕಾಗಿ ಒಂದು ಸಮ್ಮೇಳನ ಕರೆದರು. ಗಾಂಧಿಯವರು ಭಾಗವಹಿಸಿ ಬ್ರಿಟಿಷರ ಯುದ್ಧ



ಜಲಿಯನ್‌ವಾಲಾಬಾಗ್‌ನ ದೃಶ್ಯ

ಪ್ರಯತ್ನಕ್ಕೆ ಬೆಂಬಲ ಸೂಚಿಸಿದರು. ಸೈನ್ಯಕ್ಕಾಗಿ ಖೇಡಾ ಜಿಲ್ಲೆಯಲ್ಲಿ ಜನರನ್ನು ಸೇರಿಸಿದರು. ಮಹಾಯುದ್ಧ ಮುಗಿಯಿತು; ಬ್ರಿಟಿಷರಿಗೆ ಜಯವಾಯಿತು.

ಯುದ್ಧ ಮುಗಿದ ನಂತರ ತುರ್ಕಿಸ್ತಾನದಲ್ಲಿ ಖಿಲಾಫತ್ ಪ್ರಶ್ನೆ ಉಂಟಾಯಿತು. ಇದರಿಂದ ಭಾರತದ ಮುಸಲ್ಮಾನರು ಬ್ರಿಟಿಷರ ವಿರುದ್ಧ ಅತೃಪ್ತಿ ವ್ಯಕ್ತಪಡಿಸಿದರು. ಖಿಲಾಫತ್ ಚಳುವಳಿಗಾಗಿ 'ಖಿಲಾಫತ್ ಸಮಿತಿ' ಸ್ಥಾಪಿಸಿದರು.

ಭಾರತದ ಜನರು ಬ್ರಿಟನ್ನಿನ ಪರವಾಗಿ ಯುದ್ಧದಲ್ಲಿ ಭಾಗವಹಿಸಿ ಬ್ರಿಟಿಷ್ ಜಯಕ್ಕಾಗಿ ಪ್ರಾಣತ್ಯಾಗ ಮಾಡಿದರು. ಆದರೂ ದಬ್ಬಾಳಿಕೆ ನಡೆಸುವ 'ರೌಲೆಟ್' ಮಸೂದೆಯನ್ನು ಸರ್ಕಾರ ತಂದಿತು. ಗಾಂಧೀಜಿ ಈ ಮಸೂದೆಯ ವಿರುದ್ಧ ಚಳುವಳಿ ನಡೆಸಬೇಕಾಯಿತು. ಯಾವುದನ್ನೂ ಲೆಕ್ಕಿಸದೆ ಸರ್ಕಾರ ಮಸೂದೆಯನ್ನು ಕಾನೂನನ್ನಾಗಿ ಮಾಡಿತು. ಅದು ದೇಶವನ್ನೇ ಕೆರಳಿಸಿತು. ಹಿಂದೂ-ಮುಸಲ್ಮಾನರು ಒಂದಾಗಿ ಸರ್ಕಾರವನ್ನು ಎದುರಿಸಿದರು. ಸರ್ಕಾರ ಹೀನವಾದ ದಬ್ಬಾಳಿಕೆ ನಡೆಸಿತು. ಅಮೃತಸರದ "ಜಲಿಯನ್‌ವಾಲಾಬಾಗ್"ನಲ್ಲಿ ಸಾವಿರಾರು ನಿರಪರಾಧಿ ಜನಗಳನ್ನು ಗುಂಡಿಕ್ಕಿ ಕೊಂದಿತು. ಜನರಿಗೆ ಬಹಿರಂಗವಾಗಿ ಛಡಿ ಏಟು ಶಿಕ್ಷೆ ಕೊಟ್ಟರು. ಈ ಅತ್ಯಾಚಾರವನ್ನು ಯಾವ ರೀತಿ ವಿರೋಧಿಸಬೇಕೆಂದು ಗಾಂಧಿ ಯೋಚಿಸತೊಡಗಿದರು. ದಕ್ಷಿಣ ಆಫ್ರಿಕಾದಲ್ಲಿ ನಡೆಸಿದ ಅಸಹಕಾರವೇ ತಕ್ಕ ಉಪಾಯವೆಂದು ನಿಶ್ಚಯಿಸಿದರು. ಕಾಂಗ್ರೆಸ್ ಮತ್ತು ಖಿಲಾಫತ್ ಸಮಿತಿಗಳು ಗಾಂಧಿಯವರ ನೇತೃತ್ವದಲ್ಲಿ ಅಸಹಕಾರ ಘೋಷಿಸಿದವು.

ಜನರಿಗೆ ಅಹಿಂಸೆಯ ತರಬೇತಿ ಅವಶ್ಯಕತೆಯನ್ನು ಗಾಂಧಿಯವರು ಮನಗಂಡರು. ಅದಕ್ಕಾಗಿ "ಯಂಗ್ ಇಂಡಿಯ", "ನವಜೀವನ" ಎಂಬ ಎರಡು ಪತ್ರಿಕೆಗಳನ್ನು ಹೊರತಂದರು.

ಅಸಹಕಾರ ಚಳುವಳಿ ಆರಂಭವಾಗುವ ಹೊತ್ತಿಗೆ ಲೋಕಮಾನ್ಯ ತಿಲಕರು ಮೃತರಾದರು. ಎಲ್ಲಾ ಜವಾಬ್ದಾರಿ ಗಾಂಧಿ ಅವರದಾಯಿತು. ಹೂಡಿದ ಚಳುವಳಿಗಳಿಂದ ದೇಶ ಜಾಗೃತಗೊಂಡು ಚೈತನ್ಯವೂ ಬೆಳೆಯಿತು. ಅಸಹಕಾರ ಚಳುವಳಿಯಾಗಿ, ಸರ್ಕಾರಿ ನೌಕರರ ರಾಜೀನಾಮೆ, ಶಾಲಾ-ಕಾಲೇಜು, ನ್ಯಾಯಾಲಯಗಳಿಗೆ ಬಹಿಷ್ಕಾರ ಹಾಕಿದರು,



ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ

ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸಿದರು. ಸ್ವದೇಶಿ ವ್ರತದ ಪಾಲನೆ ಮುಂತಾದ ಕಾರ್ಯಕ್ರಮಗಳು ಭರದಿಂದ ನಡೆದವು. ಅಲ್ಲಲ್ಲಿ ರಾಷ್ಟ್ರೀಯ ವಿದ್ಯಾನಿಲಯಗಳು ಪ್ರಾರಂಭವಾದವು. ಈ ಸಂಸ್ಥೆಗಳಲ್ಲಿ ಸಾವಿರಾರು ಜನ ವಿದ್ಯಾರ್ಥಿಗಳು ತರಬೇತಿ ಹೊಂದಿದರು. ದೇಶದಲ್ಲೆಲ್ಲಾ ಸುಮಾರು 20 ಲಕ್ಷ ಚರಕಗಳನ್ನು ಹಂಚಿದರು. ಟಿಳಕ ಸ್ವರಾಜ್ಯ ನಿಧಿಗೆ ಒಂದು ಕೋಟಿ ರೂಪಾಯಿ ಕೂಡಿತು.

11. ತಪ್ಪು–ಒಪ್ಪಿಗೆ

ಅಹಮದಾಬಾದ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಯವರನ್ನು ಚಳುವಳಿಯ ಏಕೈಕ ನಾಯಕರೆಂದು ಘೋಷಿಸಲಾಯಿತು. ತಮ್ಮ ಕರಾರುಗಳನ್ನು ಪೂರ್ಣಗೊಳಿಸಿದರೆ ಒಂದು ವರ್ಷದಲ್ಲಿ ರಾಷ್ಟ್ರಕ್ಕೆ ಸ್ವರಾಜ್ಯ ದೊರಕುವುದೆಂದು ಗಾಂಧಿ ಅವರು ಸಾರಿದರು.

ಬಾರ್ಡೋಲಿಯಲ್ಲಿ ಸಾಮೂಹಿಕ ಸತ್ಯಾಗ್ರಹ ನಡೆಸಲು ಗಾಂಧಿ ಅವರು ಏರ್ಪಾಡು ಮಾಡಿದರು. ಸತ್ಯಾಗ್ರಹ ಇನ್ನು ಎರಡು ದಿನಗಳಲ್ಲಿ ಪ್ರಾರಂಭವಾಗಬೇಕು. ಅಷ್ಟರಲ್ಲಿ ಉತ್ತರಪ್ರದೇಶದ ಚೌರಿಚೌರದಲ್ಲಿ ಹಿಂಸಾಚಾರ ನಡೆಯಿತು. "ಅಹಿಂಸಾ ಮಾರ್ಗಕ್ಕೆ ಇನ್ನೂ ಸಿದ್ಧವಿಲ್ಲ.

ಇಷ್ಟು ಬೇಗ ಅಹಿಂಸಾತ್ಮಕ ಹೋರಾಟಕ್ಕೆ ಕರೆ ಕೊಟ್ಟಿದ್ದು ನನ್ನದೇ ತಪ್ಪು" ಎಂದು ತಮ್ಮ ತಪ್ಪನ್ನು ಒಪ್ಪಿಕೊಂಡರು. ಸತ್ಯಾಗ್ರಹವನ್ನು ನಿಲ್ಲಿಸಿದರು. ಎಲ್ಲರೂ ರಚನಾತ್ಮಕ ಕೆಲಸ ಮಾಡಬೇಕೆಂದು ಕರೆ ಕೊಟ್ಟರು. ಸತ್ಯಾಗ್ರಹ ನಿಲ್ಲಿಸುವುದರಿಂದ ಎಲ್ಲರೂ ನಿರುತ್ಸಾಹರಾದರು.

ಗಾಂಧಿ ಅವರು ದೊಡ್ಡ ನಾಯಕರು : ಶಕ್ತಿಯ ಭಂಡಾರ; ಶಕ್ತಿಯನ್ನು ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ ಎಂದು ಸರ್ಕಾರಕ್ಕೆ ಗೊತ್ತು. ಆದುದರಿಂದ ಸರ್ಕಾರ ಪುನಃ ಚಳುವಳಿ ಪ್ರಾರಂಭಿಸುವುದಕ್ಕೆ ಮುಂಚೆ ದಸ್ತಗಿರಿ ಮಾಡಿತು. ಆರು ವರ್ಷಗಳ ಕಾಲ ಸೆರೆಮನೆ ಶಿಕ್ಷೆ ವಿಧಿಸಿತು. ಆದರೆ ಗಾಂಧಿ ಅವರ ಮಾತಿಗೆ ಜನ ತಲೆಬಾಗಿ ರಚನಾತ್ಮಕ ಕಾರ್ಯಗಳನ್ನು ಕೈಗೊಂಡರು.

1922ರಲ್ಲಿ ಗಾಂಧಿ ಅವರು ದಸ್ತಗಿರಿಯಾದ ಮೇಲೆ ಕಾಂಗ್ರೆಸ್‌ನಲ್ಲಿ ಎರಡು ಗುಂಪುಗಳಾದವು. ಚಿತ್ತರಂಜನ್ ದಾಸ್, ಮೋತಿಲಾಲ್ ನೆಹರೂ ಗುಂಪಿನವರು ಅಸಹಕಾರ ಚಳುವಳಿಯ ನಿಲುವನ್ನು ಬದಲಾಯಿಸಬೇಕೆಂದು ಅಭಿಪ್ರಾಯಪಟ್ಟರು. ಆದರೆ ಸರದಾರ ವಲ್ಲಭಭಾಯಿ ಪಟೇಲ, ಗಂಗಾಧರರಾವ್ ದೇಶಪಾಂಡೆ ಮತ್ತು ರಾಜಗೋಪಾಲಾಚಾರ್ ಅವರ ಗುಂಪು, ಅಸಹಕಾರ ನೀತಿಯನ್ನೇ ಮುಂದುವರಿಸಬೇಕೆಂದು ಹೇಳಿದರು. ಇದರಿಂದ ಕಾಂಗ್ರೆಸ್‌ನಲ್ಲೇ ಬಿಕ್ಕಟ್ಟ



1926ನೇ ಇಸವಿಯ ಲಾಹೋರ್ ಕಾಂಗ್ರೆಸ್ ಅಧ್ಯಕ್ಷ ಜವಾಹರ್ ಲಾಲ್ ನೆಹರು

ಹುಟ್ಟಿತು. ಹಿಂದೂ ಮುಸಲ್ಮಾನರ ಒಗ್ಗಟ್ಟು, ಜಾತಿಯ ಗಲಭೆಗಳಿಂದ ಒಡೆಯಲು ಪ್ರಾರಂಭಿಸಿತು.

ಸೆರೆಮನೆಯಲ್ಲಿದ್ದ ಗಾಂಧಿ ಅವರಿಗೆ ಶಸ್ತ್ರಚಿಕಿತ್ಸೆಯಾಗಿ ಬಿಡುಗಡೆಯಾಯಿತು. ಆ ದೇಶದ ರಾಜಕೀಯ ಸ್ಥಿತಿ ಬದಲಾವಣೆಯಾಯಿತು. ಕಾಂಗ್ರೆಸ್ ಇಬ್ಭಾಗವಾಗಿ ಮುರಿದುಹೋಗುವ ಸಂಭವವಿತ್ತು. ಒಂದು ನಿರಾಶದಾಯಕ ವಾತಾವರಣ ಬೆಳೆಯಿತು.

1924ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಗಾಂಧಿ ಅವರೇ ಅಧಿವೇಶನಾಧ್ಯಕ್ಷರು. ಶಾಸನ ಸಭೆಗಳಿಗೆ ಹೋಗಬೇಕೆನ್ನುವವರಿಗೆ ಸಮ್ಮತಿ ಕೊಡಲಾಯಿತು. ಅವರು ತಮ್ಮ ಪಕ್ಷಕ್ಕೆ "ಸ್ವರಾಜ್ಯ ಪಕ್ಷ" ಎಂದು ಕರೆದರು. ಅಸಹಕಾರಿ ನೀತಿ ಮುಂದುವರಿಸಬೇಕು ಎನ್ನುವವರು ರಚನಾತ್ಮಕ ಕೆಲಸ ಮಾಡಲು ಗಾಂಧಿ ಅವರು ಹೇಳಿದರು. ಕೆಲವು ದಿನಗಳಲ್ಲೇ ಶಾಸಕ ಶಾಸನಸಭೆಗಳಲ್ಲಿ ನಡೆಸುವ ಹೋರಾಟದಿಂದ ಏನೂ ಪ್ರಯೋಜನವಿಲ್ಲ ಎಂದು ಸ್ವರಾಜ್ಯ ಪಕ್ಷಕ್ಕೆ ಅನ್ನಿಸಿತು. ಇದರಿಂದ ಮತ್ತೆ ಗಾಂಧಿ ಅವರನ್ನು ಕಾಂಗ್ರೆಸ್ಸಿನ ಮಾರ್ಗದರ್ಶನ ಮಾಡಲು ಆಹ್ವಾನಿಸಿದರು.

12. ಅಹಿಂಸಾತ್ಮಕ ಹೋರಾಟ

ಸೈಮನ್ ನಿಯೋಗವನ್ನು ಬಹಿಷ್ಕಾರ ಹಾಕಿದರು. ಭಾರತದ ವಿರೋಧ ಶಕ್ತಿ ಕಡಿಮೆ ಆಗಿಲ್ಲವೆಂದು ತೋರಿಸಿದರು ಯುವಜನರನ್ನು, ವಿದ್ಯಾರ್ಥಿಗಳನ್ನು ಜಾಗೃತಗೊಳಿಸಿದರು. ಸ್ವಾತಂತ್ರ್ಯದ ಬಯಕೆಯು ಹೆಚ್ಚಾಯಿತು. ಈ ಚಟುವಟಿಕೆಗಳಿಂದ ಬಾರ್ಡೋಲಿ ಸತ್ಯಾಗ್ರಹವೇ ದೇಶಕ್ಕೆ ಆತ್ಮವಿಶ್ವಾಸ ನೀಡಿತು. ಇದರ ಸೂತ್ರಧಾರ ಯಾರು ಗೊತ್ತೆ? ಅವರೇ ಸರದಾರ ವಲ್ಲಭಬಾಯಿ ಪಟೇಲರು.

ಲಾಹೋರಿನಲ್ಲಿ ಕಾಂಗ್ರೆಸ್ಸು ಅಧಿವೇಶನಕ್ಕೆ ನೆಹರು ಅಧ್ಯಕ್ಷರು. "ಸಂಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಗುರಿ" ಎಂದು ಸಾರಿತು. ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದು ಗಾಂಧಿ ಅವರ ಹೊಣೆಯಾಯಿತು. ಸ್ವರಾಜ್ಯ ಸಿಗುವವರೆಗೆ ತಮ್ಮ ಸಬರಮತಿ ಆಶ್ರಮಕ್ಕೆ ಹಿಂದಿರುಗುವುದಿಲ್ಲವೆಂದು ಗಾಂಧಿ ಸಾರಿದರು. ಆಶ್ರಮವನ್ನು ಬಿಟ್ಟುಬಿಟ್ಟರು.

ಸಂಪೂರ್ಣ ಸ್ವಾತಂತ್ರ್ಯ ಸಾಧಿಸಲು ದಂಡೀಯಾತ್ರೆಯನ್ನು ಕೈಗೊಂಡು ಉಪ್ಪಿನ ಸತ್ಯಾಗ್ರಹ ಹೂಡಿದರು. ಬ್ರಿಟಿಷರು ನಮ್ಮ ಸಂಪತ್ತು, ನೀತಿ, ಸಂಸ್ಕೃತಿ, ಧರ್ಮಗಳನ್ನು ಹಾಳುಮಾಡಿದ್ದಾರೆ. ಅವರ ಆಳ್ವಿಕೆ ಒಂದು ಶಾಪ. ಇದನ್ನು ತೆಗೆದುಹಾಕುವುದು ನಮ್ಮ ಸಂಕಲ್ಪ. ಯಾರನ್ನು ನಾವು ಹಿಂಸಿಸಲು ಹೊರಟಿಲ್ಲ. ಆದರೆ ದುಷ್ಟ ಆಡಳಿತ ನಾಶ ನಮ್ಮ ಧರ್ಮ ಎಂದು ಸಾರುತ್ತೇನೆ" ಎಂದು ಗಾಂಧಿಯವರು ಘೋಷಿಸಿದರು.

ಜನರು ಗುಂಪು ಗುಂಪಾಗಿ ಬಂದು ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಪೊಲೀಸರು ಸತ್ಯಾಗ್ರಹಿಗಳ ಮೇಲೆ ಲಾಠಿ ಪ್ರಹಾರ ಮಾಡುತ್ತಲೇ ಇದ್ದರು. ಗಾಂಧಿ ಅವರನ್ನು ದಸ್ತಗಿರಿ ಮಾಡಿದರು. ಆದರೆ ಸತ್ಯಾಗ್ರಹದ ಬಿರುಸು ಮಾತ್ರ ಕಡಿಮೆ ಆಗಲಿಲ್ಲ. ಬಾರ್ಡೋಲಿ; ಅಂಕೋಲ; ಸಿದ್ದಾಪುರಗಳಲ್ಲಿ ತೆರಿಗೆ ಕೊಡಲು ನಿರಾಕರಿಸುವುದರ ಮೂಲಕ ಸತ್ಯಾಗ್ರಹ ಮಾಡಿದರು. ಕೊನೆಗೆ ಗಾಂಧಿ ಅವರು ಸೆರೆಮನೆಯಿಂದ ಬಿಡುಗಡೆ ಆದರು. ಮಾತುಕತೆ ನಡೆದು ಗಾಂಧಿ – ಇರ್ವಿನ್ ಒಪ್ಪಂದವಾಯಿತು.

ಇದು ಕಾಂಗ್ರೆಸ್ಸಿಗೆ ದೊಡ್ಡ ಜಯ. ವೈಸ್‌ರಾಯರು ಗಾಂಧಿ ಅವರೊಡನೆ ಸಂಧಾನಕ್ಕೆ ಬಂದರು. 'ಗಾಂಧಿ–ಇರ್ವಿನ್' ಒಪ್ಪಂದಕ್ಕೆ ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಒಪ್ಪಿಗೆ ದೊರೆಯಬೇಕಾಗಿತ್ತು. ಆದರೆ ಅಧಿವೇಶನ ನಡೆಯುವುದಕ್ಕೆ ಮುಂಚೆಯೇ ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್‌ರನ್ನು ಗಲ್ಲಿಗೆ ಏರಿಸಿದರು. ಹೊಸ ಸಮಸ್ಯೆ ಉದ್ಭವಿಸಿತು. ಕಾಂಗ್ರೆಸ್ಸಿನಲ್ಲಿ ಮತ್ತೆ ಒಡಕು ಉಂಟಾಗುವ ಹಾಗಿತ್ತು. ಆದರೆ ಗಾಂಧಿಯವರು ತಪ್ಪಿಸಿದರು. ವೈಸ್‌ರಾಯರೊಡನೆ ಒಪ್ಪಂದ ಮಾಡಿಕೊಂಡರು. ಕಾಂಗ್ರೆಸ್ಸಿನ ಅನುಮತಿ ದೊರೆಯಿತು.

ಈ ಒಪ್ಪಂದದ ಫಲವಾಗಿ ಗಾಂಧಿಯವರು ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿಗೆ ಹೋದರು. ದೇಶಕ್ಕೆ ಸ್ವಾತಂತ್ರ್ಯ ಬೇಕೇಬೇಕೆಂದು ಕಾಂಗ್ರೆಸ್ಸಿನ ಬೇಡಿಕೆ. ಇದನ್ನು ಮುಸಲ್ಮಾನರು ಒಪ್ಪಿದರೆ ಅವರ ಹಿತರಕ್ಷಣೆಗಾಗಿ ತಾವು ದುಡಿಯುವುದಾಗಿ ಗಾಂಧಿಯವರು ಹೇಳಿದರು. ಇವರ ಬುದ್ಧಿಯನ್ನು ಕಂಡು ಒಬ್ಬ ಮುಸ್ಲಿಂ ನಾಯಕರು "ಗಾಂಧಿ ಮುಸ್ಲಿಂ ಧರ್ಮ ಸ್ವೀಕರಿಸಲಿಲ್ಲ. ಮುಸಲ್ಮಾನರ ಹಿತಕ್ಕಾಗಿ ಆದುದನ್ನೆಲ್ಲಾ ಮಾಡಿದರು" ಎಂದು ಹೊಗಳಿದರು.



ಗಾಂಧಿ ಸಮುದ್ರ ತೀರದಲ್ಲಿ ಉಪ್ಪನ್ನು ತೆಗೆದು ಕಾನೂನು ಭಂಗ ಮಾಡುತ್ತಿರುವುದು

13. ಸತ್ಯಾಗ್ರಹ ಅಸ್ತ್ರ ಪ್ರಯೋಗ

ಗಾಂಧಿ ಅವರ ವಿಚಾರವನ್ನು ಬ್ರಿಟಿಷ್ ರಾಜಕಾರಣಿಗಳು ಒಪ್ಪಲಿಲ್ಲ. ಲಂಡನ್ನಿನ ಸಂಧಾನ ಮುರಿಯಿತು. ಬರಿಗೈಯಿಂದ ಗಾಂಧಿಯವರು ಭಾರತಕ್ಕೆ ಬಂದ ಕೂಡಲೇ ಅವರನ್ನೂ, ಕಾಂಗ್ರೆಸ್ ನಾಯಕರನ್ನೂ ಬಂಧಿಸಿದರು. ಕಾಂಗ್ರೆಸ್ ಆಂದೋಲನವನ್ನು ಬಿರುಸಿನಿಂದಲೇ ನಡೆಸಿದರು. ಸರ್ಕಾರದ ಉಗ್ರ ದಬ್ಬಾಳಿಕೆ ದೇಶದಲ್ಲೆಲ್ಲಾ ನಡೆಯಿತು. ಪೌರಸಭೆಗಳ ಮೇಲೆ ತ್ರಿವರ್ಣ ಧ್ವಜ ಕಿತ್ತುಹಾಕಿದರು. ಬ್ರಿಟಿಷರ ಯೂನಿಯನ್ ಜಾಕ್ ಧ್ವಜ ಏರಿಸಲು ಒತ್ತಾಯಿಸಿದರು. ಪೋಲೀಸ್‌ನವರ ಮೂಲಕ ಪುಂಡು ಕಂದಾಯ ವಸೂಲಿ ಮಾಡಿದರು. ಬಂಗಾಲ ಮತ್ತು ಸರಹದ್ದು ಪ್ರಾಂತಗಳಲ್ಲಿ ದಬ್ಬಾಳಿಕೆ ಮಿತಿಮೀರಿ ನಡೆಯಿತು. ಕೆಲವು ಜಿಲ್ಲೆಗಳಲ್ಲಿ ಎಲ್ಲಾ ಜನರಿಗೆ, ಅದರಲ್ಲೂ ಹಿಂದೂಗಳಿಗೆ ಚಿತ್ರಹಿಂಸೆ ಕೊಡಲು ಪ್ರಾರಂಭಿಸಿತು. ಹೆಂಗಸರು, ಗಂಡಸರು ಯಾರೇ ಆಗಲಿ ಮನೆಯಿಂದ ಹೊರಗಡೆ ಹೋದಾಗ ಪರಿಚಯ ಪತ್ರ ಇಟ್ಟುಕೊಂಡಿರಬೇಕೆಂದು ಸಾರಿತು. ಅನೇಕರನ್ನು ಬಂಧಿಸಿ ಗಡೀಪಾರು

ಮಾಡಿತು. ಉಡುಪಿನ ನಿರ್ಬಂಧ ಬಂತು. ಎಷ್ಟೋ ಶಾಲೆ-ಕಾಲೇಜುಗಳನ್ನು ಮುಚ್ಚಿದರು. ಬೈಸಿಕಲ್ ಹತ್ತಬಾರದೆಂದು ಆಜ್ಞೆ ಮಾಡಿದರು. ಹೀಗೆ ಸರ್ಕಾರ ಅನೇಕ ವಿಧವಾದ ದಬ್ಬಾಳಿಕೆ ನಡೆಸಿತು.

1932ರಲ್ಲಿ ಇಂಗ್ಲೆಂಡಿನ ಮುಖ್ಯ ಪ್ರಧಾನಿ ರ್‍ಯಾಮ್ಸೆಮೆಕ್ ಡೊನಾಲ್ಡರು ಭಾರತಕ್ಕೆ ಜಾತಿವಾರು ಪ್ರಾತಿನಿಧ್ಯ ಕೊಡುವುದಾಗಿ ಸಾರಿದರು. ಅಸ್ಪೃಶ್ಯರನ್ನು ಹಿಂದೂಗಳಲ್ಲವೆಂದು ಭಾವಿಸಿ ಅವರಿಗೆ ಪ್ರತ್ಯೇಕ ಓಟು ಕೊಡುವ ಹಕ್ಕು ಕೊಟ್ಟರು. ಇದರಿಂದ ಅವರಿಗೆ ಬಹಳ ಅನ್ಯಾಯವಾಯಿತು. ಅಲ್ಲದೆ ಹಿಂದೂ ಧರ್ಮದ ಅಸ್ತಿತ್ವಕ್ಕೆ ಬಾಧೆ ಬಂತು.

"ಇಂಥ ತೀರ್ಮಾನವು ಜಾರಿಗೆ ಬಂದದ್ದೇ ಆದರೆ, ನಾವು ಅದನ್ನು ವಿರೋಧಿಸುತ್ತೇವೆ" ಎಂದು ಗಾಂಧಿಯವರು ದುಂಡುಮೇಜಿನ ಪರಿಷತ್ತಿನ ಸಮಯದಲ್ಲೇ ಬ್ರಿಟಿಷ್ ಸರ್ಕಾರಕ್ಕೆ ಮುನ್ನೆಚ್ಚರಿಕೆ ಕೊಟ್ಟಿದ್ದರು. ಈ ತೀರ್ಮಾನವು ಸೇರಿದ ಕೂಡಲೆ ಗಾಂಧಿಯವರು ಬ್ರಿಟಿಷ್ ಮುಖ್ಯ ಪ್ರಧಾನಿಯವರಿಗೆ ಒಂದು ಪತ್ರ ಬರೆದರು. "ಇದನ್ನು ರದ್ದು ಮಾಡದಿದ್ದರೆ ನಾನು ಆಮರಣ ಉಪವಾಸ ಕೈಗೊಳ್ಳುವೆ" ಎಂದು ತಿಳಿಸಿದರು. ಆದರೆ ಗಾಂಧಿ ಅವರ ಮಾತಿಗೆ ಕಿವಿಗೊಡಲಿಲ್ಲ. ಗಾಂಧಿ ಅವರು ಆಮರಣ ಉಪವಾಸ ಕೈಗೊಂಡರು. ಈ ಸುದ್ದಿ ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಕೂಡಲೆ ದೇಶವೆಲ್ಲಾ ಹಾಹಾಕಾರವಾಯಿತು. ಎಲ್ಲಾ ಪಕ್ಷ-ಪಂಗಡಗಳ ಮುಖಂಡರು ಮಾಲವೀಯರು ನೇತೃತ್ವದಲ್ಲಿ ಸೇರಿದರು. ಪ್ರತ್ಯೇಕ ಮತಾಧಿಕಾರ ಬೇಡವೆಂದು ಅಂಬೇಡ್ಕರ್ ಅವರೂ, ಇತರ ಹರಿಜನ ಮುಖಂಡರೂ ಒಪ್ಪಿದರು. ಇದರ ಪರಿಣಾಮವಾಗಿ ಪ್ರತ್ಯೇಕ ಮತಾಧಿಕಾರದ ತೀರ್ಮಾನವನ್ನು ಇಂಗ್ಲೆಂಡಿನ ಪಾರ್ಲಿಮೆಂಟ್ ರದ್ದು ಮಾಡಿತು.

14. ರಚನಾತ್ಮಕ ಕಾರ್ಯಕ್ರಮ

1933ರಲ್ಲಿ ಗಾಂಧಿಯವರು ಅಸ್ಪೃಶ್ಯ ಹಿಂದೂಗಳ ಹೃದಯ ಪರಿವರ್ತಿಸಲು 21 ದಿನಗಳ ಉಪವಾಸ ಮಾಡಿದರು. ಗಾಂಧಿಯವರು ತಮ್ಮ ಬಿಡುಗಡೆ ಆದ ಕೂಡಲೇ ತಾವು ಸತ್ಯಾಗ್ರಹ ನಿಲ್ಲಿಸಿರುವುದಾಗಿ ಸರ್ಕಾರಕ್ಕೆ ತಿಳಿಸಿದರು. ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲು ಬಿನ್ನವಿಸಿದರು.



ಜಾತಿವಾರು ಪ್ರಾತಿನಿಧ್ಯದ ವಿರುದ್ಧ ಉಪವಾಸ 1932

ಅನೇಕ ಕಾಂಗ್ರೆಸ್ ನಾಯಕರುಗಳು ಗಾಂಧಿ ಅವರು ಸತ್ಯಾಗ್ರಹ ನಿಲ್ಲಿಸಿದ್ದು ಸರಿಯಲ್ಲವೆಂದರು.

ಉಪವಾಸ ನಿಲ್ಲಿಸಿದ ಮೇಲೆ ಹರಿಜನ ಕಾರ್ಯಕ್ಕಾಗಿ ದೇಶವನ್ನೆಲ್ಲಾ ಸುತ್ತಾಡಿದರು. ಸನಾತನಿ ಹಿಂದೂಗಳು ಇವರ ಕಾರ್ಯವನ್ನು ವಿರೋಧಿಸಿದರು. ಆದರೆ ಅದು ಏನೂ ಪರಿಣಾಮ ಬೀರಲಿಲ್ಲ. ಈ ಪ್ರವಾಸದಿಂದ ಅಸ್ಪೃಶ್ಯತಾ ಭಾವನೆ ಹೋಗತೊಡಗಿತು. ಜನರೇ ಈ ಆಂದೋಲನಕ್ಕೆ ಮುಂದೆ ಬಂದರು. ಈ ಕೆಲಸಕ್ಕೆ ಲಕ್ಷಾಂತರ ರೂಪಾಯಿ ಕೂಡಿಬಂತು.

ಈ ಪ್ರವಾಸ ಮುಗಿದ ಮೇಲೆ ಜಮುನಾಲಾಲ ಬಜಾಜರ ಕೋರಿಕೆಯ ಮೇರೆಗೆ ವಾರ್ಧಾಗೆ ಬಂದು ನೆಲೆಸಿದರು. ಹತ್ತಿರವೇ ಆಶ್ರಮ ತೆಗೆದರು. ತಮ್ಮ ಸಮಯವನ್ನು ಖಾದಿ-ಗ್ರಾಮೋದ್ಯೋಗಗಳ ಬೆಳವಣಿಗೆಗೆ ಉಪಯೋಗಿಸಿದರು. ಹರಿಜನ ಕಾರ್ಯ ಮತ್ತು ಇತರ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಪೂರ್ಣವಾಗಿ ಮನಸ್ಸು ಹಾಕಿದರು.

ಬ್ರಿಟಿಷರು ತಮ್ಮ ಆಡಳಿತಕ್ಕೆ ಬೇಕಾಗುವ ನೌಕರರನ್ನು ತಯಾರಿಸುವ ಶಿಕ್ಷಣ ಪದ್ಧತಿ ಪ್ರಚಾರಕ್ಕೆ ತಂದರು. ಗಾಂಧಿಯವರು ಇದನ್ನು ವಿರೋಧಿಸಿದರು. ವಾರ್ಧಾ ಪದ್ಧತಿಯ ಮೂಲಕ ಶಿಕ್ಷಣದ ಯೋಜನೆಯನ್ನು ಮುಂದಿಟ್ಟರು.

ಸ್ವಾವಲಂಬನೆ ಇದರ ಮುಖ್ಯ ತಿರುಳು. ಕಾಯಕದ ಮೂಲಕವೇ 'ಶಿಕ್ಷಣ' ಎಂದು ಇದರ ಸಿದ್ಧಾಂತ.

ಗಾಂಧಿ ಅವರ ವಿಚಾರ ಪ್ರಚಾರಕ್ಕಾಗಿ 'ಗಾಂಧಿ ಸೇವಾ ಸಂಘ' ಎಂಬ ಒಂದು ಸಂಸ್ಥೆ ಇತ್ತು. ಕೆಲವು ನಿಷ್ಠಾವಂತ ಜನರೇ ಇದರ ಸದಸ್ಯರು. ಸತ್ಯಾಗ್ರಹ ಆಶ್ರಮ ಮತ್ತು 'ಗಾಂಧಿ ಸೇವಾ ಸಂಘ' ಇವೆರಡೂ ಇವರ ಪ್ರಯೋಗ ಕೇಂದ್ರಗಳು. ನೈತಿಕ ಶಕ್ತಿ ಬೆಳೆಯಿತು. ಆದರೆ ಕೆಲವರು ಗಾಂಧಿ ಸೇವಾಸಂಘದ ಬಗ್ಗೆ ದೋಷಾರೋಪಣೆ ಮಾಡಿದರು. ಒಬ್ಬ ಸತ್ಯಾಗ್ರಹಿಯ ಕಾರ್ಯದ ಬಗ್ಗೆ ಇತರರ ಸಂಶಯಕ್ಕೆ ಅವಕಾಶ ಕೊಡಬಾರದು ಎಂಬುದೇ ಗಾಂಧಿ ಅವರ ವಿಚಾರ. ಹೀಗಾಗಿ ಈ ಸಂಘವನ್ನೇ ವಿಸರ್ಜಿಸಿದರು.

ರಾಷ್ಟ್ರಕ್ಕೆಂದು ಒಂದು ರಾಷ್ಟ್ರ ಭಾಷೆ ಅವಶ್ಯಕವೆಂದು ಹಿಂದಿಯನ್ನು ರಾಷ್ಟ್ರ ಭಾಷೆಯೆಂದು ಸಾರಿದರು. ದಕ್ಷಿಣ ಭಾರತದ ಜನರಿಗೆ ಹಿಂದಿ ಕಲಿಸಲು ಅನುಕೂಲವಾಗುವಂತೆ "ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ" ಏರ್ಪಾಡಾಯಿತು. ಇದೇ ರೀತಿ ಗೋ-ಸೇವಾ, ಆದಿನಿವಾಸಿ ಕಾರ್ಯಗಳಿಗೆ ಬೇರೆ ಬೇರೆ ಸಂಸ್ಥೆಗಳನ್ನೂ ನಿರ್ಮಾಣ ಮಾಡಿದರು.



ನೂಲುತ್ತಿರುವ ಗಾಂಧೀಜಿ

15. ಸ್ವಾತಂತ್ರ್ಯ ಸಂಗ್ರಾಮ

1940ರಲ್ಲಿ ಎರಡನೆಯ ಮಹಾಯುದ್ಧದ ಬೆಂಕಿ ಎಲ್ಲಾ ಕಡೆಗೂ ಹರಡಿತು. ವೈಸ್‌ರಾಯ್ ಬ್ರಿಟಿಷ್ ಸರ್ಕಾರದೊಂದಿಗೆ ಕಾಂಗ್ರೆಸ್ಸು ಮತ್ತು ಗಾಂಧಿ ಅವರು ನಡೆಸಿದ ಸಂಧಾನಗಳೆಲ್ಲವು ವಿಫಲವಾದವು.

1940ನೇ ಅಕ್ಟೋಬರ್‌ನಲ್ಲಿ ಗಾಂಧಿ ಅವರು ವೈಯಕ್ತಿಕ ಸತ್ಯಾಗ್ರಹ ಪ್ರಾರಂಭ ಮಾಡಿದರು. ವಿನೋಭಾಜಿ ಅವರೇ ಪ್ರಥಮ ಸತ್ಯಾಗ್ರಹಿ. ಜವಹರಲಾಲರು ಎರಡನೆಯ ಸತ್ಯಾಗ್ರಹಿ. ಸತ್ಯಾಗ್ರಹ ಪ್ರಾರಂಭಿಸುವುದಕ್ಕೆ ಮುಂಚೆಯೆ ಜವಹರಲಾಲರನ್ನು ಸರ್ಕಾರ ಬಂಧಿಸಿತು. ಯುದ್ಧವಿರೋಧಿ ಘೋಷಣೆ ಮಾಡಿ ಸಾವಿರಾರು ಸತ್ಯಾಗ್ರಹಿಗಳು ಸೆರೆಮನೆ ಸೇರಿದರು. 1942ರ ಜನವರಿಯಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ಕಾಂಗ್ರೆಸ್ ಸಮಿತಿಯು ನಿಲ್ಲಿಸಲು ತೀರ್ಮಾನಿಸಿತು.

ಜರ್ಮನಿ, ಬ್ರಿಟನ್ನುಗಳಿಗೆ ಯುದ್ಧ ನಿಲ್ಲಿಸಬೇಕೆಂದು ಗಾಂಧಿ ಅವರು ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ಯುದ್ಧಕ್ಕೆ ಜಪಾನೂ ಸೇರಿತು. ಯುದ್ಧದ ಜ್ವಾಲೆ ಪ್ರಪಂಚವೆಲ್ಲಾ ಹರಡಿತು. ಜಪಾನ್, ರಂಗೂನನ್ನು



ಸೇವಾಗ್ರಾಮದಲ್ಲಿ ಪ್ರಥಮ ಸತ್ಯಾಗ್ರಹಿ
ಆಚಾರ್ಯ ವಿನೋಭಾ ಭಾವೆಯವರೊಂದಿಗೆ

ವಶಪಡಿಸಿಕೊಂಡಿತು. ಬಂಗಾಲ, ಮದ್ರಾಸುಗಳ ಮೇಲೂ ದಾಳಿ ಮಾಡಬಹುದೆಂದು ಎಲ್ಲರಿಗೂ ಅನ್ನಿಸಿತು. ಇದರಿಂದ ಬ್ರಿಟಿಷ್ ಭಾರತದ ಜನರ ಸಹಾಯ ಪಡೆಯುವುದು ಅನಿವಾರ್ಯವಾಯಿತು.

ಕಾಂಗ್ರೆಸ್ಸು ಮತ್ತು ಇತರ ರಾಜಕೀಯ ಪಕ್ಷಗಳೊಂದಿಗೆ ಸಂಧಾನ ಬಯಸಿತು. ಭಾರತದ ನೆರವು ಪಡೆಯಬೇಕೆಂದು ಬ್ರಿಟಿಷ್ ಸರ್ಕಾರ ಕ್ರಿಪ್ಸ್‌ರನ್ನು ಸಂಧಾನಕ್ಕೆ ಕಳುಹಿಸಿತು. ಮಿತ್ರರಾಷ್ಟ್ರಗಳ ಉದ್ದೇಶ ನ್ಯಾಯವಾದುದು ಎಂಬುದನ್ನು ಪ್ರಪಂಚಕ್ಕೆ ತೋರಿಸಬೇಕಾದರೆ ಭಾರತಕ್ಕೆ ಸ್ವರಾಜ್ಯ ಕೊಡಬೇಕು. ಈ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟರು. ಈ ಮನವಿಯನ್ನು ಒಪ್ಪಲಿಲ್ಲ. ಕ್ರಿಪ್ಸ್ ಸಂಧಾನ ವಿಫಲವಾಯಿತು.

1942ನೇ ಆಗಸ್ಟ್ 8ರಂದು ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸೇರಿತು. ಯುದ್ಧದ ಪರಿಸ್ಥಿತಿಯ ಬಗ್ಗೆ ವಿಚಾರವಿನಿಮಯ ಮಾಡಿತು. ಬ್ರಿಟಿಷರು ಭಾರತವನ್ನು ಬಿಟ್ಟುಹೋಗದೆ ಭಾರತಕ್ಕೆ ಉಳಿಗಾಲವಿಲ್ಲ ಎಂದು ನಿರ್ಧಾರಕ್ಕೆ ಬಂದಿತು. ಆಗಲೇ ಗಾಂಧಿ ಅವರು "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂದು ಘೋಷಿಸಿದರು. "ಮಾಡು ಇಲ್ಲವೆ ಮಡಿ" ಎಂದು ಕರೆ ನೀಡಿದರು.



ನೌಖಾಲಿಯಲ್ಲಿ ಪಾದಯಾತ್ರೆ ಮಾಡುತ್ತಿರುವ ಗಾಂಧೀಜಿ

ಇದಾದ ಕೂಡಲೇ ಸರ್ಕಾರ ಗಾಂಧಿ ಅವರನ್ನು ಕಾರ್ಯನಿರ್ವಾಹಕ ಸಮಿತಿ ಸದಸ್ಯರನ್ನು ಮತ್ತು ದೇಶದ ಎಲ್ಲ ಮುಖಂಡರನ್ನು ಒಂದೇ ದಿನ ಬಂಧಿಸಿದರು. ಇದು ಸ್ವಾತಂತ್ರ್ಯದ ಹೋರಾಟದ ರಾಷ್ಟ್ರೀಯ ಕರೆ ಆಗಿತ್ತು. ಚಳುವಳಿಯ ಮಾರ್ಗದರ್ಶಕರು ಯಾರೂ ಇಲ್ಲ. ಆದರೂ ಜನ ಗಾಂಧಿ ಅವರು ಕೊಟ್ಟ ಸಂದೇಶಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಿದರು.

16. ಬಲಿದಾನ

ಗಾಂಧಿ ಅವರನ್ನು ಬಂಧಿಸಿ ಪುಣೆಯ ಆಗಾಖಾನ ಅರಮನೆಯಲ್ಲಿ ಸೆರೆ ಇಟ್ಟರು. ಕಸ್ತೂರಿಬಾ ಮತ್ತು ಮಹದೇವ ದೇಸಾಯಿ ಅವರನ್ನೂ ಜೊತೆಯಲ್ಲಿ ಸೆರೆ ಇಟ್ಟರು. ಅಲ್ಲೇ ಮರಣಹೊಂದಿ, ಸ್ವಾತಂತ್ರ್ಯಕ್ಕೆ ಬಲಿದಾನ ಮಾಡಿದಂತಾಯಿತು. ಜನ ರೊಚ್ಚಿಗೆದ್ದರು. ಆಂದೋಲನ ಉಗ್ರವಾಯಿತು. ಸರ್ಕಾರದ ಆಸ್ತಿಪಾಸ್ತಿಗಳು ನಾಶವಾದವು. ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್‌ಗಳನ್ನು ಸುಟ್ಟರು. ಅನೇಕ ಪ್ರಾಂತ್ಯಗಳಲ್ಲಿ ಸರ್ಕಾರವೇ ಇಲ್ಲದಂತಾಯಿತು. ಅನೇಕ ನಿರಪರಾಧಿಗಳು ಸರ್ಕಾರದ ಗುಂಡಿಗೆ ತುತ್ತಾದರು. ಲಕ್ಷಾಂತರ ಜನರು ಸೆರೆಮನೆ ಸೇರಿದರು. ಅನೇಕ ದೇಶಭಕ್ತರ ಆಸ್ತಿ–ಪಾಸ್ತಿಗಳನ್ನು ಸರ್ಕಾರ ವಶಪಡಿಸಿಕೊಂಡಿತು. ಭೂಗತರಾದ ಕಾರ್ಯಕರ್ತರನ್ನು ಹಿಡಿದುಕೊಟ್ಟವರಿಗೆ 5–10 ಸಾವಿರ ಬಹುಮಾನ ಘೋಷಿಸಿತು ಸರ್ಕಾರ. ಶರಣಾಗತರಾಗದಿದ್ದರೆ ಸಿಕ್ಕಿದ ಕೂಡಲೇ ಗುಂಡಿಟ್ಟು ಕೊಲ್ಲುವುದಾಗಿ ಸಾರಿತು. ಆದರೂ ಆಂದೋಲನದ ಜ್ವಾಲೆ ಕಡಿಮೆ ಆಗಲಿಲ್ಲ. ಸಹಸ್ರಾರು ಜನರು ಮಡಿದರು.

ದೇಶದಲ್ಲಿ ನಡೆಯುತ್ತಿರುವ ಅತ್ಯಾಚಾರಕ್ಕೆ ಗಾಂಧಿ ಮತ್ತು ಕಾಂಗ್ರೆಸ್ಸಿಗರೇ ಹೊಣೆ ಎಂದು ಸರಕಾರ ಅಪಪ್ರಚಾರ ಮಾಡಿತು. 1942ನೇ ಡಿಸೆಂಬರ್‌ನಲ್ಲಿ ಗಾಂಧಿಯವರು ವೈಸ್‌ರಾಯರಿಗೆ ಒಂದು ಪತ್ರ ಬರೆದರು. ಅದರಲ್ಲಿ ಈ ಹೊಣೆಯನ್ನು ಅಲ್ಲಗಳೆದರು. "ಈ ಅತ್ಯಾಚಾರಕ್ಕೆ ತಾವು ಹೇಗೆ ಹೊಣೆಯೆಂಬುದನ್ನು ಮನವರಿಕೆ ಮಾಡಬೇಕು. ಇಲ್ಲದಿದ್ದರೆ ತಾವು ಉಪವಾಸ ಮಾಡಬೇಕಾಗುತ್ತದೆ" ಎಂದು ಪತ್ರದಲ್ಲಿ ಬರೆದರು. ವೈಸ್‌ರಾಯರಿಂದ ಉತ್ತರವೂ ಬಂತು. ಏನೂ ಉಪಯೋಗವಾಗಲಿಲ್ಲ.

1943ನೇ ಫೆಬ್ರವರಿಯಲ್ಲಿ ಗಾಂಧಿ ಅವರು 21 ದಿನಗಳ ಉಪವಾಸ ಪ್ರಾರಂಭಿಸಿದರು. ಉಪವಾಸದ ದಿನಗಳಾದಂತೆ ಇವರ ಆರೋಗ್ಯ ತೀರ ಕಳವಳಕ್ಕೆ ಕಾರಣವಾಯಿತು. ಗಾಂಧಿ ಅವರನ್ನು ಬಿಡುಗಡೆ ಮಾಡಬೇಕೆಂದು ದೇಶದ ಎಲ್ಲಾ ರಾಜಕೀಯ ಪಕ್ಷಗಳೂ ಸರಕಾರವನ್ನು ಬಿನ್ನವಿಸಿಕೊಂಡವು. ಸರ್ಕಾರ ಸಮ್ಮತಿಸಿತು. ಗಾಂಧಿ ಅವರು 21 ದಿನದ ಉಪವಾಸ ಯಶಸ್ವಿಯಾಗಿ ಮುಕ್ತಾಯಗೊಳಿಸಿದರು. ಜನರ ಆಂದೋಲನ, ಗಾಂಧಿ ಅವರ ಉಪವಾಸ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಗೆ ದೊಡ್ಡ ಪೆಟ್ಟಾಯಿತು.

1944ನೇ ಮೇ ತಿಂಗಳಲ್ಲಿ ಸರ್ಕಾರ ಯಾವ ಮುನ್ಸೂಚನೆಯೂ ಇಲ್ಲದೆ ಗಾಂಧಿ ಅವರನ್ನು ಬಿಡುಗಡೆ ಮಾಡಿತು. ಇತರರನ್ನು ಕೆಲವು ದಿನಗಳಲ್ಲಿ ಬಿಡುಗಡೆ ಮಾಡಿದ್ದು ಆಯಿತು.

17. ಹಿಂಸಾಕೃತಿ

ಬ್ರಿಟಿಷ್ ಸರ್ಕಾರಕ್ಕೆ ಯುದ್ಧದಲ್ಲಿ ಭಾರತದ ಅದರಲ್ಲೂ ಗಾಂಧಿ ಅವರ ಸಹಕಾರ-ಸಹಾಯ ಬೇಕಾಗಿತ್ತು. ಅದಕ್ಕಾಗಿ ಅವರನ್ನು ಬಿಡುಗಡೆ ಮಾಡಿದರು. "ಯುದ್ಧದಲ್ಲಿ ಸಹಾಯ ಮಾಡುವ ಅಂತಿಮ ನಿರ್ಣಯ, ಕಾಂಗ್ರೆಸ್ ಕಾರ್ಯ ನಿರ್ವಾಹಕ ಸಮಿತಿಗೆ ಸೇರಿದ್ದು. ಸಹಾಯ ಬೇಕಾದರೆ ರಾಷ್ಟ್ರ ಸ್ವತಂತ್ರವಾಗಿರಬೇಕು. ಗುಲಾಮ ರಾಷ್ಟ್ರ ಯುದ್ಧದಲ್ಲಿ ಪೂರ್ಣ ಮನಸ್ಸಿನಿಂದ ಸಹಾಯ ಮಾಡಲು ಸಾಧ್ಯವೇ ಇಲ್ಲ" ಎಂದು ಗಾಂಧಿ ಅವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದರು. ಸರ್ಕಾರ ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನು ಬಿಡುಗಡೆ ಮಾಡಿತು.

ಕಾಂಗ್ರೆಸ್ ಮತ್ತು ಇತರ ರಾಜಕೀಯ ಪಕ್ಷಗಳೊಡನೆ ಸಂಧಾನ ಮಾಡಲು ಬ್ರಿಟಿಷ್ ಸರ್ಕಾರ ಭಾರತಕ್ಕೆ ಒಂದು ನಿಯೋಗವನ್ನು ಕಳುಹಿಸಿತು. ಯುದ್ಧ ಮುಗಿದ ಮೇಲೆ ಭಾರತಕ್ಕೆ ಸ್ವರಾಜ್ಯ ಕೊಡಲಾಗುವುದು; ಅಲ್ಲಿಯವರೆಗೆ ಮಧ್ಯವರ್ತಿ ಸರ್ಕಾರ ಪುನರ್ ರಚಿಸಲಾಗುವುದು ಎಂದು ನಿಯೋಗ ತಿಳಿಸಿತು. ಕಾಂಗ್ರೆಸ್ ಒಪ್ಪಿತು. ಜಿನ್ನಾ ಮತ್ತು ಮುಸ್ಲಿಂ ಲೀಗ್, ಮಧ್ಯವರ್ತಿ ಸರ್ಕಾರದಲ್ಲಿ ತಮಗೆ ಸಮಾನವಾದ ಪ್ರಾತಿನಿಧ್ಯ ಬೇಕೆಂದೂ, ಮುಸ್ಲಿಮರ ಪರವಾಗಿ ಲೀಗ್ ಮಾತ್ರ ಪ್ರತಿನಿಧಿಗಳನ್ನು ಕಳುಹಿಸುವುದೆಂದೂ



ನೌಖಾಲಿಯಲ್ಲಿ ಸರ್ವಸ್ವವನ್ನೂ ಕಳೆದುಕೊಂಡ ನಿರ್ಗತಿಕರನ್ನು ಸಾಂತ್ವಾನಗೊಳಿಸುತ್ತಿರುವುದು

ಕರಾರು ಹಾಕಿದರು. ಇದನ್ನು ಕಾಂಗ್ರೆಸ್ ಒಪ್ಪಲಿಲ್ಲ. ಅನೇಕ ಮುಸ್ಲಿಮ ನಾಯಕರು, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ, ಕಾಂಗ್ರೆಸ್ಸಿನೊಂದಿಗೆ ಸೇರಿ ಹೋರಾಡಿದ್ದಾರೆ. ಕಾಂಗ್ರೆಸ್ ಜಾತೀಯ ಸಂಸ್ಥೆ ಅಲ್ಲ. ರಾಷ್ಟ್ರೀಯ ಮುಸಲ್ಮಾನರಿಗೆ ಮಧ್ಯವರ್ತಿ ಸರ್ಕಾರದಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ಕಾಂಗ್ರೆಸ್ ಆಗ್ರಹಪಡಿಸಿತು.

ಸರ್ಕಾರದಲ್ಲಿ ಎರಡು ಪ್ರಧಾನ ರಾಜಕೀಯ ಪಕ್ಷಗಳು ಇರಬೇಕೆಂದು ನಿಯೋಗದ ಉದ್ದೇಶ. ಇದು ಫಲಕಾರಿಯಾಗಲಿಲ್ಲ. ಲೀಗನ್ನು ಬಿಟ್ಟೇ ಸರ್ಕಾರ ರಚಿಸಿದರು. ಜಿನ್ನಾ ಮತ್ತು ಲೀಗ್ ಜನರಿಗೆ ಸಿಟ್ಟು ಬಂದಿತು. ಕಾಂಗ್ರೆಸ್ಸಿನ ಹಾಗೂ ಸರಕಾರದ ವಿರುದ್ಧ "ನೇರ ಹೋರಾಟ" (ಡೈರೆಕ್ಟ್ ಆ್ಯಕ್ಷನ್) ಹಿಂಸಾತ್ಮಕ ಚಳುವಳಿಯನ್ನೇ ಪ್ರಾರಂಭಿಸಿದರು. ಇದರಿಂದ ಬಂಗಾಲದಲ್ಲಿ 5–6 ಸಾವಿರ ನಿರಪರಾಧಿಗಳು ಕೊಲೆಯಾದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡು ತಿಂಗಳು ಆದ ಮೇಲೆ; ಆಗಿನ ವೈಸ್‌ರಾಯ್ ಲಾರ್ಡ್ ವೇವಲ್ಲರ ಮಧ್ಯಸ್ಥಿಕೆಯಿಂದ, ಮುಸ್ಲಿಂ ಲೀಗ್ ಸರ್ಕಾರವನ್ನು ಸೇರಿತು. ಇದರಿಂದ ಅವರ ಚಳುವಳಿಗೆ ಮತ್ತಷ್ಟು ಬಲ ಬಂತು.

ಮುಸ್ಲಿಮರು ಬಹುಮತವಿದ್ದ ನೌಖಾಲಿಯಲ್ಲಿ ಚಳುವಳಿ ಪ್ರಾರಂಭಗೊಂಡಿತು. ಗೂಂಡಾಗಳು ಹಳ್ಳಿಹಳ್ಳಿಗೆ ಹೋಗಿ ನಿರಪರಾಧಿಗಳ ಕೊಲೆ ಮಾಡಿದರು. ಊರು ಊರುಗಳನ್ನೇ ಬೆಂಕಿ ಹಚ್ಚಿ ಸುಟ್ಟರು. ಅನೇಕರು ಈ ಗೂಂಡಾಗಳಿಂದ ತಪ್ಪಿಸಿಕೊಂಡು ಪಶ್ಚಿಮ ಬಂಗಾಲಕ್ಕೆ ಓಡಿಬಂದರು.


18. ಸತ್ಯ–ಪ್ರೇಮ

ದೆಹಲಿಯ ಹರಿಜನ ಕಾಲೋನಿಯಲ್ಲಿ ಕುಳಿತು ಗಾಂಧಿಯವರು ಚಿಂತನೆ ಮಾಡತೊಡಗಿದರು. ಸತ್ಯಾಗ್ರಹಿಯ ಕರ್ತವ್ಯವೇನೆಂದು ವಿಚಾರದಲ್ಲಿ ಮಗ್ನರಾದರು. ನೌಖಾಲಿಯಲ್ಲಿ ಮನೆ ಹೆಂಡತಿ ಮಕ್ಕಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಮುಂದೇನು ಅವರ ಗತಿ? ಅಲ್ಲಿಗೆ ಹೋಗಿ ಇಂತಹ ಜನರಿಗೆ ಧೈರ್ಯ ಕೊಟ್ಟು ಸಹಾಯ ಮಾಡಬೇಕೆಂದು ನಿರ್ಧರಿಸಿದರು. ಗಾಂಧಿಯವರು ಅಲ್ಲಿಗೆ ಹೋಗುವುದು ಕ್ಷೇಮವಲ್ಲವೆಂದು ಅನೇಕರು ವಿನಂತಿ ಮಾಡಿಕೊಂಡರು. ಗಾಂಧಿ ಮಾತ್ರ ನಿರ್ಧಾರವನ್ನು ಹಿಂದಕ್ಕೆ ತೆಗೆದುಕೊಳ್ಳದೆ ನೌಖಾಲಿಗೆ ಪ್ರಯಾಣ ಮಾಡಿಯೇ ಬಿಟ್ಟರು. ಕಲ್ಕತ್ತೆಯಲ್ಲಿ 4–5 ದಿನಗಳಿದ್ದು ನೌಖಾಲಿ ತಲುಪಿದರು. ಅದೇ ವೇಳೆಗೆ ಬಿಹಾರದಲ್ಲಿ ಜಾತಿದಂಗೆ ಎದ್ದಿತು. ಬಿಹಾರಿನಲ್ಲಿ ದಂಗೆ ಕೂಡಲೆ ಶಾಂತಿಯಾಗದಿದ್ದರೆ ಉಪವಾಸ ಕೈಗೊಳ್ಳುವುದಾಗಿ ಹೇಳಿದರು. ತಕ್ಷಣವೇ ಅಲ್ಲಿ ಶಾಂತಿ ಉಂಟಾಯಿತು.

"ಮಾಡು ಇಲ್ಲವೇ ಮಡಿ" ಎಂಬ ನಿರ್ಧಾರದಿಂದ ಗಾಂಧಿಯವರು ನೌಖಾಲಿಗೆ ಹೊರಟಿದ್ದು. ಒಂಟಿಯಾಗಿ ಪಾದಯಾತ್ರೆ ಪ್ರಾರಂಭಿಸಿದರು. ನೊಂದ ಹಿಂದೂಗಳನ್ನು ಭೇಟಿ ಮಾಡಿ ಸಮಾಧಾನಪಡಿಸಲು ಪ್ರಾರಂಭಿಸಿದರು. ಮುಸಲ್ಮಾನರಿಗೆ ಸರಿಯಾದ ಧರ್ಮಬೋಧನೆ ಮಾಡತೊಡಗಿದರು. ಮೊದಮೊದಲು ಪ್ರಾರ್ಥನಾ ಸಭೆಗೆ ಯಾವ ಮುಸಲ್ಮಾನರೂ ಬರುತ್ತಿರಲಿಲ್ಲ. ಕೆಲವೇ ದಿನಗಳಲ್ಲಿ ವಾತಾವರಣವೆ ಬದಲಾವಣೆ ಆಯಿತು. ದಿನಗಳೆದಂತೆ, ವಿಚಾರ ತಿಳಿದಂತೆ ಸಾವಿರಾರು ಮುಸಲ್ಮಾನರು ಪ್ರಾರ್ಥನಾ ಸಭೆಗೆ ಬರಲು ಪ್ರಾರಂಭಿಸಿದರು. ಗಾಂಧಿ ಅವರನ್ನು ಕರೆದುಕೊಂಡು ಹೋಗಿ ಮನೆಯಲ್ಲೇ ಇಟ್ಟುಕೊಂಡರು.

1947ನೇ ಆಗಸ್ಟ್ 15ರಂದು ಬ್ರಿಟಿಷರು ತಮ್ಮ ಅಧಿಕಾರವನ್ನೆಲ್ಲಾ ಬಿಟ್ಟುಕೊಟ್ಟರು. ಭಾರತ ಸ್ವತಂತ್ರ ದೇಶವಾಯಿತು. ಆದರೆ ಭಾರತ, ಪಾಕಿಸ್ತಾನ ಎಂದು ಎರಡು ಭಾಗಗಳಾದವು. ಪಂಜಾಬ ಮತ್ತು ಬಂಗಾಲ ಪ್ರಾಂತಗಳು ಇಬ್ಭಾಗವಾದವು. ಆಗಸ್ಟ್ 15ಕ್ಕೆ 8–10 ದಿನಗಳ ಮುಂಚೆ ಜಾತಿದಂಗೆ ವಿಕೋಪಕ್ಕೆ ಹೋಯಿತು. ಅನೇಕ ಮುಸಲ್ಮಾನರ ಮನೆಗಳು ಸುಟ್ಟವು. ಸಾವಿರಾರು ಜನ ಬೀದಿ ಪಾಲಾದರು. ಕೂಡಲೇ ಗಾಂಧಿ ಅವರು ಕಲ್ಕತ್ತಾಗೆ ಧಾವಿಸಿದರು.

ಗಾಂಧಿ ಅವರು ಮುಸ್ಲಿಮರ ಬೀದಿಯಲ್ಲೇ ಬಿಡಾರ ಹೂಡಿದರು. ಇದರಿಂದ ಆ ಜನಕ್ಕೆ ಸ್ವಲ್ಪ ನೆಮ್ಮದಿಯಾಯಿತು. ಆದರೂ ವೈಷಮ್ಯ ಹೋಗಿರಲಿಲ್ಲ. ಕೊಲೆ, ಸುಲಿಗೆ ಒಂದೇ ಸಮನೆ ನಡೆಯುತ್ತಿತ್ತು. "ಹಿಂದೂ



ಗಾಂಧೀಜಿಯವರ ಪ್ರಾರ್ಥನಾ ಮಂದಿರ

ಮುಸಲ್ಮಾನರು" ದಂಗೆಯನ್ನು ನಿಲ್ಲಿಸಿ ಮೊದಲಿನಂತೆ ಅಣ್ಣ-ತಮ್ಮಂದಿರ ಹಾಗೆ ಇರಬೇಕು. ಇಲ್ಲವಾದರೆ ತಾವು ಆಮರಣ ಉಪವಾಸ ಕೈಗೊಳ್ಳುವುದಾಗಿ ಗಾಂಧಿ ಅವರು ಘೋಷಿಸಿದರು. ಇಡೀ ದೇಶವೇ ಚಿಂತೆಯಲ್ಲಿ ಮುಳುಗಿತು.

19. ಅಹಿಂಸೆಯ ಪವಾಡ

ದೇವರು ಮತ್ತು ಅಹಿಂಸೆಗಳಲ್ಲಿ ಗಾಂಧಿ ಅವರಿಗೆ ಅಪಾರ ವಿಶ್ವಾಸ. ಉಪವಾಸಕ್ಕೆ ಮುಂಚೆ ಕಲ್ಕತ್ತೆಯ ಹಿಂದೂಗಳು ಮುಸ್ಲಿಮರ ಬೀದಿಯಲ್ಲಿ, ಮುಸ್ಲಿಮರು ಹಿಂದೂಗಳ ಬೀದಿಯಲ್ಲಿ ಹೋಗುವುದು ಸಾಧ್ಯವಿರಲಿಲ್ಲ. ಗಾಂಧಿ ಅವರು ಉಪವಾಸ ಪ್ರಾರಂಭಿಸಿದರು. ಕೂಡಲೇ ಎಲ್ಲಾ ಗಲಾಟೆಗಳೂ ನಿಂತವು. ಆಗಸ್ಟ್ 15ರ ಪ್ರಾರ್ಥನೆಯ ಸಭೆಗೆ 2-3 ಲಕ್ಷ ಹಿಂದೂ-ಮುಸಲ್ಮಾನರು ಸೇರಿದ್ದರು. ಒಟ್ಟುಗೂಡಿ ಮೆರವಣಿಗೆ ಹೋದರು. "ಮಹಾತ್ಮ ಗಾಂಧೀಗೆ ಜೈ" ಎಂದು ಜಯಕಾರ ಮಾಡಿದರು. ಮುಸಲ್ಮಾನ ಮುಖಂಡರು, ಹಿಂದೂ ಮಹಾಸಭಾ ಮತ್ತು ಕಾಂಗ್ರೆಸ್ಸಿನ ಮುಖಂಡರೂ ಸೇರಿ ಒಪ್ಪಂದ ಮಾಡಿಕೊಂಡರು. ಇಷ್ಟು ಜಾಗ್ರತೆಯಿಂದ ದಂಗೆ ಶಾಂತವಾದದ್ದು ಎಲ್ಲರಿಗೂ ಆಶ್ಚರ್ಯ. ಗಾಂಧಿ ಅವರನ್ನು 'ಪವಾಡ ಪುರುಷ' ಎಂದರು. ಆಗಿನ ವೈಸ್‌ರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು "ಒಬ್ಬ ಮನುಷ್ಯನ ಅತ್ಯದ್ಭುತ ಶಕ್ತಿ!" ಎಂದರು. ಹೀಗೆ ಗಾಂಧಿ ಅವರು ತೋರಿಸಿದ ಅಹಿಂಸಾಶಕ್ತಿಯ ಪವಾಡ ಎಷ್ಟೋ!

ಇದೇ ಸಮಯದಲ್ಲಿ ದೆಹಲಿಯಲ್ಲಿ ಮತ್ತು ಪಂಜಾಬಿನಲ್ಲಿ ಜಾತೀಯ ದಂಗೆ ಹೆಚ್ಚಾದವು. ಹಿಂದೂ, ಸಿಖ್ಖರು, ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೂ, ಮುಸಲ್ಮಾನರು ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೂ ಓಡಿಹೋಗುವ ದೃಶ್ಯ ಕರುಣಾಜನಕವಾಗಿತ್ತು. ದೆಹಲಿಯಲ್ಲಿ ಮುಸಲ್ಮಾನರು ಮನೆ ಮಾರುಗಳನ್ನು ಕಳೆದುಕೊಂಡು, ಮಸೀದಿಗಳನ್ನು ಸಾರ್ವಜನಿಕ ಸ್ಥಳಗಳನ್ನು ಸೇರಿದರು. ಮೊದಲು ಗಾಂಧಿ ಅವರು ಇರುತ್ತಿದ್ದ ಹರಿಜನ ಕಾಲೋನಿಯೂ ಸಹ ನಿರಾಶ್ರಿತರಿಂದ ತುಂಬಿಹೋಗಿತ್ತು. ಆದುದರಿಂದ ಗಾಂಧಿಯವರು ಬಿರ್ಲಾಭವನದಲ್ಲಿ ಇದ್ದರು. ಪಶ್ಚಿಮ ಬಂಗಾಲದಲ್ಲಿ ನೆಲಸಿದರು. ನಿರಾಶ್ರಿತರ ಸ್ಥಿತಿಯೂ ತೀರಾ ಕಷ್ಟ ಮಾಯವಾಗಿತ್ತು.


ಗಾಂಧಿ ಅವರು ದಿನವೂ ಸಾಯಂಕಾಲ ತಮ್ಮ ಪ್ರಾರ್ಥನಾ ಸಭೆ ನಡೆಸುತ್ತಿದ್ದರು. ದೆಹಲಿಯ ದಂಗೆ ಕುರಿತು ಹಿಂದೂಗಳಿಗೂ ಈ ರೀತಿ ವರ್ತಿಸಬಾರದೆಂದು ಬೋಧಿಸಿದರು. ಮುಸಲ್ಮಾನ ಮತ್ತು ಹಿಂದೂ ನಿರಾಶ್ರಿತ ಜನರ ಶಿಬಿರಗಳನ್ನು ಸಂದರ್ಶಿಸಿ ಅವರುಗಳನ್ನು ಸಮಾಧಾನಗೊಳಿಸುತ್ತಿದ್ದರು. ಅವರ ಈ ಕಾರ್ಯ ಹಿಂದೂ ಮಹಾಸಭೆ; ರಾಷ್ಟ್ರೀಯ ಸ್ವಯಂಸೇವಕ ಸಂಘಗಳಿಗೆ ಸರಿದೋರಲಿಲ್ಲ. ಮುಸಲ್ಮಾನರ ಬಗ್ಗೆ ಗಾಂಧೀಜಿಯವರು ಪಕ್ಷಪಾತ ಮಾಡುತ್ತಿದ್ದಾರೆಂದು ದೂಷಿಸಿದರು. ದೆಹಲಿಯಲ್ಲಿ ಉಪವಾಸ ಮಾಡುವುದಾಗಿ ಗಾಂಧಿಯವರು ಸಾರಿದರು. ಆಗ ರಾಜಧಾನಿಯಲ್ಲಿ ಶಾಂತಿ ನೆಲೆಸಿತು.

20. ಪ್ರಾಣಾಹುತಿ

ಭಾರತ-ಪಾಕಿಸ್ತಾನ ಇಬ್ಭಾಗವಾದಾಗ ಭಾರತವು ಪಾಕಿಸ್ತಾನಕ್ಕೆ 55 ಕೋಟಿ ರೂಪಾಯಿ ಕೊಡಬೇಕೆಂದು ಗೊತ್ತಾಯಿತು. ಇದೇ ಕಾಲಕ್ಕೆ ಕಾಶ್ಮೀರದ ಪ್ರಶ್ನೆ ಹುಟ್ಟಿತು. ಇನ್ನೂ ಕೊಟ್ಟು ತೆಗೆದುಕೊಳ್ಳುವ ಲೆಕ್ಕಾಚಾರ ನಡೆಯುತ್ತಿತ್ತು. ಇದೆಲ್ಲ ಮುಗಿದ ಮೇಲೆ, ತಾವು ಪಾಕಿಸ್ತಾನಕ್ಕೆ ಕೊಡಬೇಕಾದ ಹಣವನ್ನು ಕೊಡುವುದಾಗಿ ಭಾರತ ಹೇಳಿತು. ಗಾಂಧಿ ಅವರು "ಪಾಕಿಸ್ತಾನಕ್ಕೆ ಕೊಡಬೇಕಾದುದನ್ನು ಕೊಟ್ಟುಬಿಡಿ. ಅವರಿಂದ ಬರಬೇಕಾದುದನ್ನು ಆಮೇಲೆ ತೆಗೆದುಕೊಳ್ಳಿ" ಎಂದು ಭಾರತ ಸರ್ಕಾರಕ್ಕೆ ಸಲಹೆ ಮಾಡಿದರು. ಇದು ಅನೇಕರಿಗೆ ಸರಿಕಾಣಲಿಲ್ಲ.

ಆಗಿನ ಗೃಹಮಂತ್ರಿಗಳಾದ ವಲ್ಲಭಭಾಯಿಯವರಿಗೆ ಗಾಂಧಿ ಅವರ ಕೊಲೆಯ ಸಂಚು ನಡೆಯುತ್ತದೆಂದು ಸಂಶಯ ಬಂದಿತು. ಗಾಂಧಿ ಅವರ ಪ್ರಾರ್ಥನಾ ಸಭೆಗೆ ಬರುವವರನ್ನು ಗುಪ್ತ ಪೋಲೀಸರಿಂದ ಸಂಶಯ ಬಂದಾಗ ಶೋಧಿಸಬೇಕೆಂದು ವಿಚಾರ ಮಾಡಿದರು. ಗಾಂಧಿ ಅವರು ಒಪ್ಪಲಿಲ್ಲ. "ನನ್ನನ್ನು ರಕ್ಷಿಸುವವನು ಪರಮಾತ್ಮ; ಮನುಷ್ಯನಲ್ಲ" ಎಂದು ಸ್ಪಷ್ಟವಾಗಿ ಹೇಳಿದರು. ಇದರಿಂದ ಪಟೇಲರೂ ನಿರುಪಾಯರಾದರು.

1948ನೇ ಜನವರಿ 30ರಂದು ಗಾಂಧಿ ಅವರು ಬೆಳಗ್ಗೆ ಎದ್ದು ನಿತ್ಯದಂತೆ ತಮ್ಮ ಎಲ್ಲಾ ಕೆಲಸಗಳನ್ನು ಮುಗಿಸಿದರು. 10 ಗಂಟೆಗೆ ಊಟ ಮುಗಿಸಿದರು. ಬರೆಯುವುದನ್ನೆಲ್ಲಾ ಬರೆದರು. ಮಧ್ಯಾಹ್ನ ವಲ್ಲಭಭಾಯಿ ಜೊತೆಯಲ್ಲಿ



ಅಂತ್ಯ ದರ್ಶನಕ್ಕಾಗಿ ಬಿರ್ಲಾ ಭವನದಲ್ಲಿ ಇರಿಸಿದ ಗಾಂಧೀಜಿ ಅವರ ಕಳೇಬರಹ

ಬಹಳ ಹೊತ್ತು ಮಾತನಾಡುತ್ತಿದ್ದರು. ಪ್ರಾರ್ಥನೆಯ ಹೊತ್ತಾದರೂ ಮಾತು ಮುಗಿಯಲಿಲ್ಲ. ಮನೂಗಾಂಧಿ ಅವರು, ಗಾಂಧೀಜಿ ಅವರ ಮುಂದೆ ಗಡಿಯಾರ ಇಟ್ಟರು. ಗಡಿಯಾರ ನೋಡಿದ ಕೂಡಲೇ ಪ್ರಾರ್ಥನೆಗೆ ಹೊರಟರು. ಹತ್ತು ನಿಮಿಷ ತಡವಾಗಿತ್ತು. ಗಾಂಧಿ ಅವರು ಜನಸಮುದಾಯಕ್ಕೆ ಕೈಮುಗಿಯುತ್ತಾ ಹೊರಟಿದ್ದರು. ಅವರ ಎರಡು ಕಡೆ ಮನೂಗಾಂಧಿ, ಆಭಾಗಾಂಧಿ ಇದ್ದರು. ಇನ್ನೇನು ಪ್ರಾರ್ಥನೆಯ ವೇದಿಕೆಯನ್ನು ಹತ್ತಬೇಕು, ಅಷ್ಟರಲ್ಲಿ ನಾಥುರಾಮ್ ಗೋಡ್‌ಸೆ ಎಂಬುವವನು ಮುಂದೆ ಬಂದು ಅವರ ಎದೆಗೆ ಹಾಗೂ ಹೊಟ್ಟೆಗೆ ಮೂರು ಗುಂಡು ಹಾರಿಸಿದ. ಗಾಂಧಿ ಅವರು "ಹೇ ರಾಮ, ಹೇ ರಾಮ" ಎಂದು ಬಿದ್ದರು.

ಈ ಸುದ್ದಿ ಪಟ್ಟಣದಲ್ಲೆಲ್ಲಾ ಹಬ್ಬಿತು. ಪಟೇಲ, ನೆಹರೂ, ಲಾರ್ಡ್ ಮೌಂಟ್‌ಬ್ಯಾಟನ್ ಮೊದಲಾದವರು ಬಿರ್ಲಾ ಭವನಕ್ಕೆ ಧಾವಿಸಿದರು, ಆಗಲೇ ಗಾಂಧಿ ಅವರ ಪ್ರಾಣ ಹಾರಿಹೋಗಿತ್ತು. ಲಕ್ಷಾಂತರ ಜನರು ಅವರ ಅಂತಿಮ ದರ್ಶನಕ್ಕಾಗಿ ಬರುತ್ತಲೇ ಇದ್ದರು.

ಮರುದಿನ 11 ಗಂಟೆಗೆ ಅವರ ಪಾರ್ಥಿವ ಶರೀರದ ಸ್ಮಶಾನಯಾತ್ರೆ, ಮೌನ ವೈಭವದಿಂದ ಹೊರಟಿತು. ರಾಷ್ಟ್ರಪಿತನಿಗೆ ಸಲ್ಲಿಸುವ ಗೌರವವನ್ನೆಲ್ಲಾ ಸಲ್ಲಿಸಿದರು. ಸಾಯಂಕಾಲ 5 ಗಂಟೆಗೆ ಯಮುನಾ ನದೀ ತೀರದಲ್ಲಿ ವೈದಿಕ ಪದ್ಧತಿಯಂತೆ ಅಂತ್ಯಕ್ರಿಯೆ ನಡೆಯಿತು.

ಗಾಂಧೀಜಿಯವರ ನಶ್ವರ ದೇಹ ನಶಿಸಿತು.
ಮಹಾತ್ಮ ಗಾಂಧಿ ಅಮರರಾದರು!

ಗಣ್ಯರು ಕಂಡಂತೆ ಗಾಂಧೀಜಿ

"ಶಾಂತಿ, ಸಹಿಷ್ಣತೆ ಮತ್ತು ಪ್ರೀತಿಯಿಂದ ವಿಶ್ವವನ್ನೇ ಬದಲಾಯಿಸಿದ ಈ ಮಹಾನ್ ಚೇತನವನ್ನು ನಾವು ಸದಾ ಸ್ಮರಿಸುತ್ತೇವೆ. ಅವರು ಕಾಲಾತೀತರಾಗಿ 60 ವರ್ಷಗಳೇ ಕಳೆದರೂ ಅವರ ವ್ಯಕ್ತಿತ್ವದ ಬೆಳಕು ಮಾತ್ರ ವಿಶ್ವವನ್ನು ಸ್ಫೂರ್ತಿಗೊಳಿಸುತ್ತಲೇ ಇದೆ. ಇವರು ನನಗಷ್ಟೇ ಸ್ಫೂರ್ತಿಯಲ್ಲ, ಜಗತ್ತಿನ ಜನರಿಗೆಲ್ಲ ಸ್ಫೂರ್ತಿ"

–ಬರಾಕ್ ಒಬಾಮ, ಅಮೆರಿಕಾದ ಅಧ್ಯಕ್ಷರು

"ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತ ಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರುವ ಪೀಳಿಗೆ ಸಂದೇಹಿಸುವುದು ಸಾಧ್ಯ".

–ಆಲ್ಬರ್ಟ್ ಐನ್‌ಸ್ಟೀನ್

(1939ರಲ್ಲಿ ಗಾಂಧೀಜಿಗೆ 70 ವರ್ಷ ತುಂಬಿದಾಗ ಸಲ್ಲಿಸಿದ ನುಡಿನಮನ)

"ಗಾಂಧಿಯನ್ನು ಯುರೋಪಿನ ಯಾವ ಕ್ರಾಂತಿಕಾರಿ ನಾಯಕನೊಡನೆಯೂ ಹೋಲಿಸಲು ಸಾಧ್ಯವಿಲ್ಲ. ಕೇವಲ ಶಾಸನಗಳನ್ನು, ತೀರ್ಪುಗಳನ್ನು ಸೃಷ್ಟಿ ಮಾಡುವ ಹಂಬಲವಲ್ಲ ಅವರದು. ಒಂದು ನೂತನ ಮಾನವೀಯತೆಯನ್ನೇ ತಮ್ಮ ತ್ಯಾಗ, ಬಲಿದಾನಗಳಿಂದ ಜೀವಂತಗೊಳಿಸುತ್ತಿದ್ದಾರೆ. ತಮ್ಮ ಸಮಕಾಲೀನ ಚಿಂತನೆಗಳಿಗಿಂತ ಬಹುದೂರದ ಭವಿಷ್ಯವನ್ನು ರೂಪಿಸುತ್ತಿದ್ದರೂ ತಮ್ಮ ಜನತೆಯ ತಾತ್ಕಾಲಿಕ ಬೃಹತ್ ಸಮಸ್ಯೆಗಳಿಗೆ ವಿಮುಖರಾಗಿಲ್ಲ. ಗೆಲುವಿನಲ್ಲಿ ಅಟ್ಟಹಾಸವಾಗಲಿ, ವೈಯಕ್ತಿಕ ಡಾಂಭಿಕತನವಾಗಲಿ ಅವರಲ್ಲಿ ಸುಳಿಯದು. ವಾಸ್ತವವಾಗಿ ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿಯೇ ಉಳಿದಿದ್ದಾರೆ... ಆತ ಮತ್ತೊಬ್ಬ ಏಸು."

–ರೊಮೈನ್ ರೊಲ್ಯಾಂಡ್ (ನೊಬೆಲ್ ಪ್ರಶಸ್ತಿ ಪುರಸ್ಕೃತರು)

"ನಮ್ಮಂತೆ ಮಾನವನಾಗಿ ಜನಿಸಿ, ನಮ್ಮಂತೆ ಅನ್ನ, ಜಲ, ವಾಯು ಸೇವಿಸಿ ನಮ್ಮಂತೆ ಈ ನೆಲದ ಮೇಲೆ ನಡೆದ ಈ ವ್ಯಕ್ತಿ ಮಾನವನೇ"?

–ಜಾರ್ಜ್ ಬರ್ನಾಡ್ ಷಾ

"ಗಾಂಧೀ ದೈಹಿಕವಾಗಿ ಚಿಕ್ಕ ಪ್ರಮಾಣದವರು. ಆದರೆ ಮಾತು ಗಂಭೀರ, ತೀಕ್ಷ್ಣ. ಅವರು ಸಹನೆಯ ಪ್ರತಿಮೂರ್ತಿ. ಯಾವ ಕಾಠಿಣ್ಯವೂ ಅವರ ಬಳಿ ಸುಳಿಯದು. ಹಸುಳೆಯ ಸ್ವಭಾವದ ಅವರ ಆತ್ಮಸಂಯಮ ಚರಮ ರೇಖೆಯನ್ನು ಮುಟ್ಟಿದೆ. ಅವರ ಆಶ್ರಮ ಜೀವನ ಕಷ್ಟಕರವಾದುದು. ಕಾರಣ ನಿಸ್ಸೀಮ ಸಂಕಟ. ತನಗೆ ಅದೊಂದು ಶಿಕ್ಷಣವೆನ್ನುತ್ತಾರೆ. ಸೆರೆಮನೆಯ ವಾಸ ಅವರಿಗೆ ಬಹುಸುಲಭ. ಬಂಧನದಲ್ಲಿದ್ದಾಗಲೆಲ್ಲ ಆತ್ಮಶುದ್ಧಿ, ಪ್ರಾರ್ಥನೆ, ಕಠೋರ ಶಿಸ್ತು ಪಾಲಿಸುತ್ತಾರೆ. ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅದೊಂದು ಅಮೋಘ ಶಕ್ತಿಯಾಗಿದೆ."

–ಸಿ. ಎಫ್. ಆಂಡ್ರೂಸ್

"ಸೋದರಭಾವದಿಂದ ನಿಮ್ಮನ್ನು ನಮಸ್ಕರಿಸುತ್ತೇನೆ. ನಿಮ್ಮ ಪರಿಚಯವಾದುದು ಬಹಳ ಸಂತೋಷ"

–ಟಾಲ್‌ಸ್ಟಾಯ್

"ಗಾಂಧೀಜಿಯವರಂತಹ ಮಹಾನ್ ವ್ಯಕ್ತಿಯನ್ನು ಪಡೆದ ಭಾರತೀಯರು ಪುಣ್ಯವಂತರು. ಭಾರತಕ್ಕೆ ಮಾತ್ರ ಸ್ವತಂತ್ರವನ್ನು ತಂದದಲ್ಲದೆ, ಇತರ ಮಾರ್ಗವನ್ನು ಅನುಸರಿಸಿ, ಜಗತ್ತಿನಲ್ಲಿ ಗುಲಾಮಗಿರಿ ದೇಶಗಳೇ ಇಲ್ಲದಂತೆ ಆಗಿದೆ. ಜಗತ್ತಿನಲ್ಲಿ ಯುದ್ಧಗಳು ಇಲ್ಲದಂತೆ ಆಗಿದೆ."

–ಜೆ. ಸಿ. ಸ್ಮಟ್ಸ್

"ಹೊರಗಿನ ಯಾವುದೇ ಸತ್ತೆಯ ನೆರವಿಲ್ಲದೆ ತಮ್ಮ ಜನತೆಗೆ ನಾಯಕರಾಗಿದ್ದರು. ರಾಜನೀತಿಜ್ಞರೆನಿಸಿದ್ದರೂ ಅವರು ಬರೀ ಯುಕ್ತಿ, ತಂತ್ರ, ಉಪಾಯ ಮತ್ತು ಪ್ರಭುತ್ವವನ್ನಾಶ್ರಯಿಸಲಿಲ್ಲ. ಮನವೊಲಿಸಿಕೊಳ್ಳುವುದರಲ್ಲಿ ಅವರ ವ್ಯಕ್ತಿತ್ವ ಅತ್ಯಂತ ಪರಿಣಾಮಕಾರಿ. ಅವರದು ಗೆಲುವಿನ ಹೋರಾಟ, ಸೇನೆ ಮತ್ತು ಬಲಾತ್ಕಾರದ ವಿಷಯದಲ್ಲಿ ಅವರಿಗೆ ಯಾವಾಗಲೂ ತಿರಸ್ಕಾರ. ಅವರದು ವಿವೇಕ ಬುದ್ಧಿ: ನಮ್ರತೆಯ ಮೂರ್ತಿ, ಮಂತ್ರಸ್ವರೂಪ. ಅವರ ನಿಷ್ಠೆ, ಸಂಕಲ್ಪ ಬದಲಾಗದಂಥದು. ಮಣಿಯುವ ಸ್ವಭಾವವೇ ಅವರದ್ದಲ್ಲ. ಜನತೆಯ ಕಲ್ಯಾಣಕ್ಕಾಗಿ ಅವರು ತಮ್ಮನ್ನು ಸಮರ್ಪಿಸಿಕೊಂಡರು. ಅವರು ವಿರೋಧಿಸಿದ್ದು ಯುರೋಪಿನ ಪಾಶವೀ ಶಕ್ತಿಯನ್ನು. ಅದೂ ಸಾಮಾನ್ಯ ಮನುಷ್ಯನಿಗೆ ಎಟುಕುವ ರೀತಿಯಲ್ಲಿ, ಘನತೆ-ಗೌರವಗಳನ್ನು ಕಾಪಾಡಿಕೊಂಡು ಎಲ್ಲ ಕಾಲಕ್ಕೂ ಎದ್ದು ನಿಲ್ಲುವಂತಹ ಶ್ರೇಷ್ಠ ಮಾರ್ಗ ಅವರದು. ರಕ್ತ-ಮೂಳೆ-ಮಾಂಸಗಳಿಂದ ಇಂತಹ ವ್ಯಕ್ತಿ ಜಗತ್ತಿನಲ್ಲಿ ಸಂಚರಿಸಿದ್ದಾನೆ, ಬದುಕಿದ್ದಾನೆ ಎಂದು ಮುಂಬರುವ ಪೀಳಿಗೆ ಸಂಶಯವನ್ನು ಪಡಬಹುದು."

–ಆಲ್ಬರ್ಟ್ ಐನ್‌ಸ್ಟೀನ್

ದೀನ-ನಿರ್ಗತಿಕರ ಗುಡಿಸಲುಗಳ ಮುಂದೆ ಅವರು ತಲೆಬಾಗಿ ನಿಂತರು. ಅವರದೇ ಉಡುಪು ತೊಟ್ಟರು. ಅವರ ಭಾಷೆಯಲ್ಲೇ ಮಾತನಾಡಿಸಿದರೆ, ಅವರು ಬರೇ ಗ್ರಂಥಗಳ ಅವತರಣವಾಗಿರಲಿಲ್ಲ. ಸತ್ಯದ ಜೀವಂತ ಪ್ರತೀಕರಾಗಿದ್ದರು. ಇದೇ ಅವರನ್ನು 'ಮಹಾತ್ಮಾ' ಪದವಿಗೇರಿಸಿದ್ದು. ಭಾರತದ ಜನಸ್ತೋಮ ಅವರಿಗಿಟ್ಟ ನಿಜವಾದ ಹೆಸರು ಇದು. ಎಲ್ಲ ಭಾರತೀಯರನ್ನೂ ಅವರು ತಮ್ಮ ರಕ್ತ-ಸಂಬಂಧಿಗಳೆಂದು ತಿಳಿದಿದ್ದರು. ಹೀಗೆ ಭಾವಿಸುವವರೆಷ್ಟು ಜನರಿದ್ದಾರೆ ನಮ್ಮಲ್ಲಿ."

–ರವೀಂದ್ರನಾಥ ಠಾಕೂರ್

ನನ್ನ ಕನಸಿನ ಭಾರತ

ಇದು ನಮ್ಮ ದೇಶ, ಇದರ ನಿರ್ಮಾಣದಲ್ಲಿ ನಮ್ಮದೂ ಧ್ವನಿಯಿದೆ ಎಂದು ಎಲ್ಲಿ ಕಡು ಬಡವರೂ ಭಾವಿಸಬಲ್ಲರೋ, ಜನರ ಮಧ್ಯೆ ಶ್ರೀಮಂತ, ಬಡವರೆಂಬ ತಾರತಮ್ಯ ಎಲ್ಲಿ ಇರುವುದಿಲ್ಲವೋ, ಸಂಪೂರ್ಣ ಸೌಹಾರ್ದತೆಯಲ್ಲಿ ಎಲ್ಲಾ ಸಮುದಾಯದವರೂ ಜೀವಿಸಬಲ್ಲರೋ – ಅಸ್ಪೃಶ್ಯತೆಯ ಶಾಪವಾಗಲೀ, ಮದ್ಯ, ಮಾದಕ ದ್ರವ್ಯಗಳ ಶಾಪವಾಗಲೀ ಎಲ್ಲಿ ತಟ್ಟದೋ ಅಂಥ – ಭಾರತದ ನಿರ್ಮಾಣಕ್ಕಾಗಿ ಶ್ರಮಿಸುತ್ತೇನೆ. ಇಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಹಕ್ಕಿರಬೇಕು ಹಾಗೂ ನಾವು ಜಗತ್ತಿನ ಎಲ್ಲರೊಂದಿಗೆ ಶಾಂತಿಯುತವಾಗಿ ಬಾಳುವಂತಿರಬೇಕು. ಇದು ನನ್ನ ಕನಸಿನ ಬಾರತ.

INDIA OF MY DREAMS

I shall work for an India in which the poorest shall feel that it is their country, in whose making they have an effective voice, an India in which there shall be no high class and low class of people; and India in which all communities shall live in perfect harmony. There can be no rooms in such an India for the curse of untouchability or the curse of intoxicating drinks and drugs, women will enjoy the same rights as men. We shall be at peace with all the rest of world. This is the INDIA OF MY DREAMS.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896 ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906 ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915
ಸಾಬರಮತಿ ಆಶ್ರಮ ಸ್ಥಾಪನೆ	1915

ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಯಾತ್ರೆ	1933
ಹರಿಜನ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10-00
2.	ಕರ್ನಾಟಕದಲ್ಲಿ ಗಾಂಧೀ	5-00
3.	ರಾಮನಾಮ	6-00
4.	ಗಾಂಧೀ ಬಳಗದ ವಿದೇಶಿಯರು	40-00
5.	ಆರೋಗ್ಯ	8-00
6.	ಪ್ರಾರ್ಥನೆ	8-00
7.	ಸತ್ಯಾಗ್ರಹ	8-00
8.	ಮಹಿಳೆಯರಿಗಾಗಿ	8-00
9.	ಪಂಚಾಯತ್ ರಾಜ್	12-00
10.	ಆದರ್ಶಗಳು	12-00
11.	ನಮ್ಮ ಗಾಂಧೀ ತಾತ	25-00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2-00
13.	ನಮ್ಮ ಗಾಂಧೀ ತಾತ	15-00
14.	ಹೋರಾಟ ಶ್ರೀ	40-00
15.	ಮಹಾತ್ಮ ಗಾಂಧೀಜಿಯವರ ಮೈಲಿಗಲ್ಲು	3-00
16.	ಗಾಂಧೀಜಿ ಜೀವನ ಚರಿತ್ರೆ	25-00
17.	ಕುವೆಂಪು ಕಂಡ ಗಾಂಧೀ	25-00
18.	ಉಪ್ಪಿನ ಸತ್ಯಾಗ್ರಹ	5-00
19.	ಹಿಂದ್ ಸ್ವರಾಜ್	50-00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25-00
21.	ನನ್ನ ಕನಸಿನ ಭಾರತ	30-00
22.	ಹಿಂದೂ ಧರ್ಮ	25-00
23.	ಮಹಿಳೆಯರು	30-00
24.	ಸ್ವಾತಂತ್ರ್ಯ	25-00
25.	ಅಸ್ಪೃಶ್ಯತೆ	30-00
26.	ಒಳ್ಳೆಯ ಜೀವನ	25-00
27.	ಪ್ರಾರ್ಥನೆ	25-00
28.	ಗಾಂಧೀ ಮತ್ತು ಕರ್ನಾಟಕ	200-00
29.	ಸತ್ಯ	30-00
30.	ವಿದ್ಯಾರ್ಥಿಗಳಿಗಾಗಿ	30-00
31.	ಸರ್ವೋದಯ	30-00

32. ಖಾದಿ ಗ್ರಾಮೋದ್ಯೋಗ	30–00
33. ನನ್ನ ಬಾಲ್ಯದ ನೆನಪುಗಳು	30–00
34. ಗ್ರಾಮರಾಜ್ಯ ಆಡಳಿತ	5–00
35. ನನ್ನ ಕನಸಿನ ಸ್ವರಾಜ್ಯ	5–00
36. ಗಾಂಧೀ ಮತ್ತು ಹಾಸ್ಯ	20–00
37. ನನ್ನ ಆದರ್ಶಗ್ರಾಮ	5–00
38. ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	48–00
39. ಸತ್ಯಾಗ್ರಹಿ	40–00
40. ಗ್ರಾಮದಾನ ಗ್ರಾಮ ಸ್ವರಾಜ್ಯ	25–00
41. ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42. ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
43. ಸತ್ಯಾಗ್ರಹ	5–00
44. ಹಿಂದ್ ಸ್ವರಾಜ್	5–00
45. ಆರೋಗ್ಯ	5–00
46. ಮಹಾತ್ಮ ಗಾಂಧಿ ಪ್ರಸ್ತುತತೆ	10–00
47. ಬಹುರೂಪಿ ಗಾಂಧಿ	10–00
48. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
49. ಕೃತಯುಗಿ ವಿನೋಬಾ ಭಾವೆ	15–00
50. ಮೋಹನ ತರಂಗ	40–00
51. ನಮ್ಮ ಗಾಂಧಿ ತಾತ	5–00
52. ಗೀತಾ ಪ್ರವಚನ	80–00
53. ಜೆ.ಪಿ. ಜೀವನ ಹಾದಿ	45–00
54. ಗಣ್ಯರು ಕಂಡಂತೆ ಗಾಂಧಿ	20.0
55. ಗೀತಾಮಾತೆ	80.00
56. Temple & Mosque	10–00
57. Rastrapita Mahatma Gandhi	25–00
58. Swarajya of Dreams	5–00
59. Gandhi My Grand Father	5–00
60. Grand Pa Gandhi	5–00
61. Relevance of Gandhi	20–00
62. Vinoba age of the sage	20.00

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**


ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗ	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿ	**Students**



ಡಾ. ಹೊ. ಶ್ರೀನಿವಾಸಯ್ಯ

(1925 – 2017)

ಗಾಂಧೀಜಿ ಅವರ ಜೀವನ ಚಿತ್ರಣವನ್ನು ಸಂಕ್ಷಿಪ್ತವಾಗಿ ಹೇಳುವುದು ಬಹಳ ಕಷ್ಟಕರವಾದ ವಿಷಯವಾಗಿದೆ. ಅಂಥಹ ಕಾರ್ಯವನ್ನು ಇಷ್ಟಪಟ್ಟು ಮಾಡಿರುವ ಗಾಂಧೀ ಭವನದ ಹಿಂದಿನ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರ ಶ್ರಮ ಸಾರ್ಥ್ಯಕ್ಯವಾಗಿದೆ. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ಹೊಸದಾಗಿ ಅಕ್ಷರಸ್ಥರಾಗುವವರಿಗೆ ಗಾಂಧೀಜಿ ಅವರನ್ನು ಸರಳವಾಗಿ ಮತ್ತು ಸುಲಭವಾಗಿ ಅರಿತುಕೊಳ್ಳಲು ಈ ಪುಸ್ತಕ ಕೈದೀವಿಕೆಯಾಗಿದೆ. ಗಾಂಧಿ ವಿಚಾರ ಸಂಸ್ಕಾರ್ ಪರೀಕ್ಷೆ ಬರೆಯುವ ಪುಟ್ಟಮಕ್ಕಳಿಗೆ ಪಠ್ಯವಾಗಿರುವ ಈ ಪುಸ್ತಕ 'ಮಕ್ಕಳ ಗಾಂಧೀ ತಾತ' ನನ್ನು ಕೊನೆಯಿರದ ನಂಟಿನ ಭಾವದಲ್ಲಿ ಬೆಸೆದಿರುವುದು ರಾಷ್ಟ್ರಪ್ರೇಮದ ದ್ಯೋತಕವಾಗಿದೆ.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ
ಕರ್ನಾಟಕ ಗಾಂಧೀ ಸ್ಮಾರಕ ನಿಧಿ